ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ಸಂಬಂಧಪಟ್ಟಂತೆ ಬ್ಯಾಂಕ್‌ನ ಬದ್ಧತೆಯ ಸಂಹಿತೆ

ಆಗಸ್ಟ್ 2015

ಬ್ಯಾಂಕಿಂಗ್ ಕೋಡ್ ಆಂಡ್ ಸ್ಟಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯಾ
www.bcsbi.org.in

ದಿನ ನಿತ್ಯದ ವ್ಯವಹಾರಗಳಲ್ಲಿ ಮತ್ತು ಆರ್ಥಿಕ ಸಂಕಷ್ಟಗಳ ಸಂದರ್ಭದಲ್ಲಿ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳ ಗ್ರಾಹಕರಿಗೆ ಅಗತ್ಯವಾಗಿ ಬೇಕಾಗುವ ಬ್ಯಾಂಕಿಂಗ್ ಸೌಲಭ್ಯವನ್ನು ಸರಳವಾಗಿ, ಶೀಘ್ರವಾಗಿ ಮತ್ತು ಪಾರದರ್ಶಕವಾಗಿ ನೀಡಬೇಕೆಂಬ ಬ್ಯಾಂಕಿನ ಬದ್ಧತೆಯನ್ನು ಬಿಂಬಿಸುವ ಸಂಹಿತೆಯಿದು. ಈ ಸಂಹಿತೆಯು ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳ ಗ್ರಾಹಕರ ಹಕ್ಕುಗಳ ಪಟ್ಟಿ ಮಾತ್ರವಾಗಿರದೆ, ಬ್ಯಾಂಕುಗಳ ಬಗ್ಗೆ ಅವರಿಗಿರಬೇಕಾದ ಕರ್ತವ್ಯಗಳ ಯಾದಿಯೂ ಆಗಿದೆ. ಸಾಮಾನ್ಯ ಗ್ರಾಹಕರಿಗೆ ಅನ್ವಯಿಸುವ ಬ್ಯಾಂಕ್‌ನ ಬದ್ಧತೆಯ ಸಂಹಿತೆಯಲ್ಲಿ ಅಡಕವಾಗಿರುವ ತತ್ವಗಳು ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳ ಗ್ರಾಹಕರಿಗೂ ಎಲ್ಲೆಲ್ಲಿ ಸಂದರ್ಭೋಚಿತವೋ ಅಲ್ಲೆಲ್ಲಾ ಅನ್ವಯಿಸುತ್ತವೆ.

ಪ್ರಸ್ತಾವನೆ

ಇದೊಂದು ನೀತಿ ಸಂಹಿತೆಯಾಗಿದ್ದು, ಅತಿ ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಳ (ಎಮ್‌ಎಸ್‌ಇಗಳು) ಜೊತೆ ವ್ಯವಹರಿಸುವಾಗ ಅತಿ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳ ಅಭಿವೃದ್ಧಿ(ಎಮ್‌ಎಸ್‌ಎಮ್‌ಇಡಿ) ಅಧಿನಿಯಮ, 2006ರಲ್ಲಿ ವ್ಯಾಖ್ಯಾನಿಸಿರುವಂತೆ ಬ್ಯಾಂಕುಗಳು ಅನುಸರಿಸಬೇಕಾದ ಬ್ಯಾಂಕಿಂಗ್ ವ್ಯವಹಾರಗಳ ಕನಿಷ್ಟ ಮಾನದಂಡಗಳನ್ನು ರೂಪಿಸುತ್ತದೆ. ಇದು ನಿಮಗೆ ರಕ್ಷಣೆಯನ್ನು ನೀಡುತ್ತದೆ ಮತ್ತು ನಿಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಹಾಗೂ ಅರ್ಥಿಕ ಸಂಕಷ್ಟ ಸಮಯದಲ್ಲಿ ಬ್ಯಾಂಕು ನಿಮ್ಮೊಡನೆ ಯಾವ ರೀತಿ ವ್ಯವಹರಿಸುತ್ತದೆ ಎಂಬುದನ್ನು ವಿವರಿಸುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಸೂಚಿಸಿರುವ ನಿಯಂತ್ರಣಗಳನ್ನು ಅಥವಾ ಮೇಲ್ವಿಚಾರಣಾ ಸೂಚನೆಗಳನ್ನು ಈ ನೀತಿಸಂಹಿತೆಯು ಬದಲಿಸುವುದಿಲ್ಲ ಅಥವಾ ರದ್ದುಗೊಳಿಸುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಕಾಲ–ಕಾಲಕ್ಕೆ ನೀಡುವ ಅಂತಹ ಸೂಚನೆಗಳನ್ನು/ನಿರ್ದೇಶನಗಳನ್ನು ನಾವು ತಪ್ಪದೇ ಅನುಪಾಲಿಸುತ್ತೇವೆ. ನಿಯಂತ್ರಣಗಳಲ್ಲಿ ಅಥವಾ ಮೇಲ್ವಿಚಾರಣಾ ಸೂಚನೆಗಳಲ್ಲಿ ವಿಧಿಸಲಾಗಿರುವ ಮಾನದಂಡಕ್ಕಿಂತ ಹೆಚ್ಚಿನ ಮಾನದಂಡವನ್ನು, ನೀತಿ ಸಂಹಿತೆಯ ಉಪಬಂಧಗಳು ಸೂಚಿಸಬಹುದು ಮತ್ತು ನಿಮಗೆ ಅತ್ಯುತ್ತಮ ಸೇವೆ ನೀಡುವ ಬಾಧ್ಯತೆ ನಮಗಿದ್ದು ಈ ಸಂಹಿತೆಯು ಅದನ್ನು ಪ್ರತಿನಿಧಿಸುವುದರಿಂದ ಅಂತಹ ಉನ್ನತ ಮಾನದಂಡವು ಆಚರಣೆಯಲ್ಲಿರುತ್ತದೆ.

ಈ ಸಂಹಿತೆಯಲ್ಲಿ 'ನೀವು' ಎಂಬ ಪದವು ಭಾರತದಲ್ಲಿರುವ ಎಮ್‌ಎಸ್‌ಇಯ ಗ್ರಾಹಕರನ್ನು ಸೂಚಿಸುತ್ತದೆ ಮತ್ತು 'ನಾವು' ಎಂಬ ಪದವು ನೀವು ವ್ಯವಹರಿಸುವ ಬ್ಯಾಂಕನ್ನು ಸೂಚಿಸುತ್ತದೆ.

1.1. ಕೋಡ್‌ನ ಉದ್ದೇಶಗಳು

ಈ ಕೋಡ್‌ನ ಉದ್ದೇಶಗಳು ಹೀಗಿವೆ: **ಅ)** ದಕ್ಷ ಬ್ಯಾಂಕಿಂಗ್ ಸೇವೆಯನ್ನು ಸುಲಭವಾಗಿ ಮತ್ತು ಸೂಕ್ತವಾಗಿ ಒದಗಿಸುವ ಮೂಲಕ ಎಮ್‌ಎಸ್‌ಇ ವಲಯಕ್ಕೆ ರಚನಾತ್ಮಕ ಒತ್ತನ್ನು ನೀಡುವುದು. **ಆ)** ನಿಮ್ಮೊಂದಿಗೆ ವ್ಯವಹರಿಸುವಾಗ ಕನಿಷ್ಠ ಮಾನದಂಡಗಳನ್ನು ನಿರ್ಧರಿಸುವುದರ ಮೂಲಕ ಒಳ್ಳೆಯ ಮತ್ತು ನಿಷ್ಪಕ್ಷಪಾತ ಬ್ಯಾಂಕಿಂಗ್ ಪದ್ಧತಿಗಳ ಸಂವರ್ಧನೆ **ಇ)** ಸೇವೆಗಳಿಗೆ ಸಂಬಂಧಪಟ್ಟಂತೆ ನೀವು ಸಮಂಜಸವಾಗಿ ಏನನ್ನು ನಿರೀಕ್ಷಿಸಬಹುದು ಎನ್ನುವುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಪಾರದರ್ಶಕತೆಯನ್ನು ಹೆಚ್ಚಿಸುವುದು. **ಈ)** ಪರಿಣಾಮಕಾರಿ ಸಂವಹನೆಯ ಮೂಲಕ ನಿಮ್ಮ ವ್ಯವಹಾರದ ಬಗೆಗಿನ ಅರಿವನ್ನು ನಾವು ಹೆಚ್ಚಿಸಿಕೊಳ್ಳುವುದು. **ಉ)** ಉತ್ತಮ ಪರಿಚಲನಾತ್ಮಕ ಮಾನದಂಡಗಳನ್ನು ಪಡೆಯಲು ಪ್ರತಿಸ್ಪರ್ಧೆಯ ಮೂಲಕ ಮಾರುಕಟ್ಟೆಯ ಶಕ್ತಿಗಳನ್ನು ಪ್ರೋತ್ಸಾಹಿಸುವುದು. **ಊ)** ನಿಮ್ಮ ಮತ್ತು ನಮ್ಮ ನಡುವೆ ಯುಕ್ತ ಮತ್ತು ಸೌಹಾರ್ದಯುತವಾದ ಸಂಬಂಧವನ್ನು ವೃದ್ಧಿಸುವುದು ಮತ್ತು ಸಕಾಲದ ಹಾಗು ತ್ವರಿತ ಸೇವೆಯನ್ನು ಖಾತರಿ ಪಡಿಸುವುದು. **ಋ)** ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಿಶ್ವಾಸ ಹೆಚ್ಚಿಸುವುದು.

ಕೋಡ್ ನ ಮಾನದಂಡಗಳನ್ನು ಭಾಗ 2 ರಲ್ಲಿ ಇರುವ ಪ್ರಮುಖ ಬದ್ಧತೆಗಳಲ್ಲಿ ನೋಡಬಹುದು.

1.2 ಕೋಡ್‌ನ ಅನ್ವಯ

2006ರ ಎಮ್‌ಎಸ್‌ಎಮ್‌ಇಡಿ ಕಾಯಿದೆಯಲ್ಲಿ ವಿವರಿಸಿರುವಂತೆ ಎಮ್‌ಎಸ್‌ಇಗಳು ಸರಕುಗಳ ತಯಾರಿಕೆ ಅಥವಾ ಉತ್ಪಾದನೆ ಅಥವಾ ಸಂಸ್ಕರಣೆ ಅಥವಾ ಸೇವೆಗಳನ್ನು ಒದಗಿಸುವ ಅಥವಾ ಸಲ್ಲಿಸುವ ಕಾರ್ಯದಲ್ಲಿ ನಿರತರಾಗಿರುವ ಅತಿಸಣ್ಣ ಮತ್ತು ಸಣ್ಣ ಉದ್ದಿಮೆದಾರರನ್ನು ಒಳಗೊಂಡಿರುತ್ತದೆ.

ಅನ್ಯಥಾ ಉಲ್ಲೇಖಿಸಲಾಗಿರದಿದ್ದರೆ ಈ ಕೋಡ್‌ನ ಎಲ್ಲ ಭಾಗಗಳು ಕೆಳಗೆ ಪಟ್ಟಿ ಮಾಡಲಾಗಿರುವ ಎಲ್ಲ ಉತ್ಪನ್ನ ಮತ್ತು ಸೇವೆಗಳಿಗೆ (ಅವು ಶಾಖೆಗಳು ಅಥವಾ ಸಹಾಯಕ ಸಂಸ್ಥೆಗಳ ಮೂಲಕ, ಕೌಂಟರ್ ಮುಖಾಂತರ, ಫ್ಲೋನ್, ಅಂಚೆ, ಇಂಟರಾಕ್ಟಿವ್ ಇಲೆಕ್ಟ್ರಾನಿಕ್ ಉಪಕರಣಗಳು, ಇಂಟರ್‌ನೆಟ್ ಮೂಲಕ ಅಥವಾ ಇನ್ನಾವುದೇ ವಿಧದಿಂದ ನೀಡಲ್ಪಟ್ಟಿರಲಿ) ಅನ್ವಯಿಸುತ್ತವೆ. ಆದಾಗ್ಯೂ ಇಲ್ಲಿ ಚರ್ಚಿಸಲಾಗಿರುವ ಎಲ್ಲ ಉತ್ಪನ್ನಗಳನ್ನು ಎಲ್ಲ ಬ್ಯಾಂಕುಗಳು ನೀಡಬಹುದು / ನೀಡದಿರಬಹುದು. **ಅ)** ಸಾಲಗಳು ಮತ್ತು ಇತರ **ಸಾಲ** ಸೌಲಭ್ಯಗಳು ಮತ್ತು ಬ್ಯಾಲೆನ್ಸ್ ಶೀಟ್ ನಿಂದ ಹೊರತುಪಡಿಸಿರುವ ಉತ್ಪನ್ನಗಳು ಉದಾ: ಉದರಿ ಪತ್ರಗಳು, ಓವರ್‌ಡ್ರಾಫ್ಟ್‌ಗಳು, ಚೆಕ್ ಮತ್ತು ಸ್ವದೇಶಿ ಹಾಗೂ ವಿದೇಶಿ ಬಿಲ್‌ಗಳ ಖರೀದಿ ಮತ್ತು

ಮಾರಾಟ, ಸಾಲಪತ್ರಗಳ ಆಧಾರದ ಮೇಲೆ ಕಾಯ್ದಿಟ್ಟ ದಾಖಲೆಗಳ ಸಂಬಂಧಿ ವ್ಯವಹಾರ (ಸ್ವದೇಶಿ ಹಾಗೂ ವಿದೇಶಿ), ಹಾಗೂ ಸಾಲಪತ್ರಗಳ ಆಧಾರದ ಮೇಲೆ (ಡಿ/ಪಿ ಅಥವ ಡಿ/ಎ) ಸ್ವದೇಶಿ–ವಿದೇಶಿ ಸಂಸ್ಥೆಗಳ ನಿಧಿಯೇತರ ವ್ಯವಹಾರಗಳು, ಸ್ವದೇಶಿ ಹಾಗೂ ವಿದೇಶಿ ವ್ಯವಹಾರಗಳಿಗೆ ಖಾತರಿ ಒದಗಿಸುವುದು, ಸ್ವದೇಶಿ–ವಿದೇಶಿ ಬಿಲ್ ಅಥವ ಚೆಕ್‌ಗಳ ಸಂಗ್ರಹಣೆ, ಸಹಸಮ್ಮತಿ ಮತ್ತು ಬಿಲ್‌ಗಳ ಪಡೆದುಕೊಳ್ಳುವಿಕೆ, ಖರೀದಿದಾರರ ಸಾಲ ಇತ್ಯಾದಿ **ಆ)** ಫೆಮಾ/ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಿ ಸೂತ್ರಗಳಡಿಯಲ್ಲಿ ಹಣ ಬದಲಾವಣೆ ಸಹಿತ ಅನುಮತಿಸಿದ ವಿದೇಶಿ ವಿನಿಮಯ ಸೇವೆಗಳು ಇ) ನಮ್ಮ ಶಾಖೆ/ಅಥವ ನಮ್ಮ ಅಧಿಕೃತ ಪ್ರತಿನಿಧಿಗಳು ಅಥವ ಏಜೆಂಟರ ಮೂಲಕ ಮಾರಾಟವಾದ ತೃತೀಯ ಪಕ್ಷ ವಿಮೆ ಮತ್ತು ವಿನಿಯೋಜಕ ಉತ್ಪನ್ನಗಳು ಈ) ಫ್ಯಾಕ್ಟರಿಂಗ್ ಸೇವೆಗಳು ಉ) ವಾಣಿಜ್ಯ ಸೇವೆಗಳು.

2. ಪ್ರಮುಖ ಬದ್ಧತೆಗಳು

2.1 ನಿಮ್ಮ ಕುರಿತು ನಮ್ಮ ಮುಖ್ಯ ಬದ್ಧತೆಗಳು

2.1.1. ಈ ಕೆಳಕಂಡ ವಿಷಯಗಳಲ್ಲಿ ನಿಮ್ಮೊಂದಿಗಿನ ನಮ್ಮ ಎಲ್ಲ ವ್ಯವಹಾರಗಳಲ್ಲಿ ನಿಷ್ಪಕ್ಷ ಮತ್ತು ನ್ಯಾಯಪರವಾಗಿರುವುದು

ಅ) ಬ್ಯಾಂಕಿನ ಕೌಂಟರ್‌ನಲ್ಲಿ ನಗದು / ಚೆಕ್‌ಗಳ ಸ್ವೀಕಾರ ಮತ್ತು ಪಾವತಿಯ ಸೌಕರ್ಯಗಳನ್ನು ಒದಗಿಸುವುದು.

ಆ) ತ್ವರಿತ ಮತ್ತು ದಕ್ಷ ಉದ್ದರಿ ಮತ್ತು ರವಾನೆಸೇವೆಯನ್ನು ಒದಗಿಸುವುದು.

ಇ) ನಾವು ನೀಡಬೇಕೆಂದು ಹೇಳಲಾದ ಉತ್ಪನ್ನ ಮತ್ತು ಸೇವೆಗಳ ವಿಚಾರದಲ್ಲಿ ಮತ್ತು ನಮ್ಮ ಸಿಬ್ಬಂದಿ ಅನುಸರಿಸುವ ಕಾರ್ಯವಿಧಿ ಮತ್ತು ಪದ್ಧತಿಗಳ ವಿಚಾರದಲ್ಲಿ ಈ ಕೋಡ್‌ನಲ್ಲಿರುವ ಬದ್ಧತೆ ಮತ್ತು ಮಾನದಂಡಗಳನ್ನು ಕಾಯ್ದುಕೊಳ್ಳುವುದು.

ಈ) ನಮ್ಮ ಉತ್ಪನ್ನಗಳು ಮತ್ತು ಸೇವೆಗಳು ಪ್ರಸ್ತುತ ಕಾನೂನುಗಳನ್ನು ಮತ್ತು ನಿಯಮಾವಳಿಗಳನ್ನು ನಿಮ್ಮ ಅಗತ್ಯಗಳಿಗನುಸಾರವಾಗಿ ಅಕ್ಷರಶಃ ಅನುಸರಿಸುತ್ತವೆ ಎನ್ನುವುದನ್ನು ಖಾತರಿಗೊಳಿಸುವುದು.

ಉ) ನಿಮ್ಮೊಂದಿಗಿನ ನಮ್ಮ ಎಲ್ಲ ವ್ಯವಹಾರಗಳು ಸಮಗ್ರತೆ ಹಾಗೂ ಪಾರದರ್ಶಕತೆಯ ನೈತಿಕ ಮೌಲ್ಯಗಳ ಮೇಲೆ ನಡೆಯುವಂತೆ ನೋಡಿಕೊಳ್ಳುವುದು.

ಊ) ಸುರಕ್ಷಿತವಾದ ಮತ್ತು ಭರವಸೆಪೂರಿತವಾದ ಬ್ಯಾಂಕಿಂಗ್ ಹಾಗೂ ಪಾವತಿ ಮತ್ತು ಇತ್ಯರ್ಥ ಪದ್ಧತಿಗಳನ್ನು ನಡೆಸುವುದು.

ಋ) ಆರ್ಥಿಕ ಮುಗ್ಗಟ್ಟಿನ ಪ್ರಕರಣಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದು (ಪ್ಯಾರಾ 5.8 ನೋಡುವುದು)

2.1.2 ಈ ಕೆಳಕಂಡ ಸಂಗತಿಗಳ ಮೂಲಕ ನಮ್ಮ ಉತ್ಪನ್ನಗಳು ಮತ್ತು ಸೇವೆಗಳು ಹೇಗೆ ಕೆಲಸ ಮಾಡುತ್ತವೆ ಎನ್ನುವುದನ್ನು ತಿಳಿಯಲು ನಿಮಗೆ ಸಹಾಯ ಮಾಡುವುದು:

ಅ) ಹಿಂದಿ, ಇಂಗ್ಲಿಷ್ ಅಥವಾ ಸಂಬಂಧಪಟ್ಟ ಸ್ಥಳೀಯ ಭಾಷೆಗಳಲ್ಲಿ ಅವುಗಳ ಬಗ್ಗೆ ಮಾಹಿತಿ ನೀಡುವುದು.

ಆ) ನಮ್ಮ ಜಾಹೀರಾತು ಮತ್ತು ಸಂವರ್ಧನೆ ಸಾಹಿತ್ಯವು ಸ್ಪಷ್ಟವಾಗಿದೆಯೆಂದು ಖಾತರಿ ಪಡಿಸಿಕೊಳ್ಳುವುದು, ಮತ್ತು ದಾರಿ ತಪ್ಪಿಸದಂತಿರುವುದು.

ಇ) ನಮ್ಮ ಉತ್ಪನ್ನ ಮತ್ತು ಸೇವೆಗಳ ಬಗ್ಗೆ ಅವುಗಳಿಗೆ ಅನ್ವಯವಾಗುವ ಷರತ್ತು ಮತ್ತು ಕರಾರುಗಳು ಮತ್ತು ಬಡ್ಡಿ ದರಗಳು / ಸೇವಾ ಶುಲ್ಕಗಳ ಬಗ್ಗೆ ನಿಮಗೆ ಸ್ಪಷ್ಟವಾದ ಮಾಹಿತಿ ನೀಡಲಾಗುತ್ತವೆ ಎನ್ನುವುದನ್ನು ಖಾತರಿ ಪಡಿಸಿಕೊಳ್ಳುವುದು.

ಈ) ನಮ್ಮ ತೃತೀಯ ಪಕ್ಷದ ಉತ್ಪನ್ನಗಳ ಅಕ್ರಮ ಮಾರಾಟ ನಡೆಯದಂತೆ ಖಾತರಿ ಪಡಿಸಿಕೊಳ್ಳುವುದು.

ಉ) ನಿಮಗೆ ಸಿಗುವ ಸೌಲಭ್ಯಗಳು ಯಾವುವು, ನೀವು ಈ ಸೌಲಭ್ಯಗಳನ್ನು ಹೇಗೆ ಪಡೆಯಬಲ್ಲಿರಿ, ಮತ್ತು ಹೇಗೆ ದೊರಕಿಸಿಕೊಳ್ಳಬಹುದು ಎಂಬ ನಿಮಗಿರುವ ಪ್ರಶ್ನೆಗಳ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವ ವಿಚಾರದಲ್ಲಿ ನೀವು ಯಾರನ್ನು ಮತ್ತು ಹೇಗೆ ಸಂಪರ್ಕಿಸಬಹುದು ಮತ್ತು ಹೇಗೆ ಪರಿಹರಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಮಾಹಿತಿ ನೀಡುವುದು.

2.1.3 ನಿಮ್ಮ ಖಾತೆ ಅಥವಾ ಸೇವೆಯ ಉಪಯೋಗದಲ್ಲಿ ನಿಮಗೆ ಸಹಾಯ ನೀಡುವುದು

ಅ) ನಿಮಗೆ ನಿಯಮಿತವಾಗಿ ಸೂಕ್ತ ನಿಯಮಿತ ಮಾಹಿತಿಯನ್ನು ಒದಗಿಸುವುದು

ಆ) ಬಡ್ಡಿ ದರಗಳು, ಶುಲ್ಕಗಳು ಅಥವಾ ಷರತ್ತುಗಳು ಮತ್ತು ಕರಾರುಗಳಲ್ಲಿನ ಬದಲಾವಣೆಗಳ ಬಗ್ಗೆ ನಿಮಗೆ ಸೂಚನೆ ಕೊಡುವುದು

ಇ) ನಮ್ಮ ಶಾಖೆಗಳಲ್ಲಿ ನಿಮ್ಮ ಮಾಹಿತಿಗಾಗಿ ಪ್ರಕಟಿಸುವುದು

I. ನಾವು ಒದಗಿಸುವ ಸೇವೆಗಳು
II. ಚಾಲ್ತಿ ಖಾತೆಗೆ ಅಗತ್ಯವಾಗಿರುವ ಕನಿಷ್ಠ ನಗದಿನ ಉಳಿಕೆ ಮತ್ತು ಅದಿಲ್ಲದಾಗ ತಗಲುವ ವೆಚ್ಚಗಳು
III. ನಿಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಸಂಪರ್ಕಿಸಬೇಕಾದ ಶಾಖೆಯ ಅಧಿಕಾರಿಯ ಹೆಸರು

IV. ಒಂದೊಮ್ಮೆ ಆ ಶಾಖೆಯಲ್ಲಿ ನಿಮ್ಮ ಸಮಸ್ಯೆಗೆ ಪರಿಹಾರ ದೊರಕದಿದ್ದರೆ ಸಂಪರ್ಕಿಸಬೇಕಾದ ವಲಯ/ಪ್ರಾದೇಶಿಕ ಕಚೇರಿಗಳ ಮುಖ್ಯ ನೋಡಲ್ ಅಧಿಕಾರಿಗಳ ಹೆಸರು ಮತ್ತು ವಿಳಾಸ

V. ನಮ್ಮ ಬ್ಯಾಂಕಿನ ಮುಖ್ಯ ವಿಜಿಲೆನ್ಸ್ ಅಧಿಕಾರಿ ಅವರ ಹೆಸರು/ ವಿಳಾಸ ಮತ್ತು ಸಂಪರ್ಕಿಸಬೇಕಾದ ಸಂಖ್ಯೆ

VI. ಆ ಶಾಖೆಯ ವ್ಯಾಪ್ತಿಗೆ ಬರುವ ಬ್ಯಾಂಕಿಂಗ್ ಲೋಕಪಾಲರ ಹೆಸರು, ಸಂಪರ್ಕ ವಿವರಗಳು

VII. ನಿಯಮಾವಳಿಗಳ ಪಟ್ಟಿ/ ದಾಖಲೆಗಳ ಮಾಹಿತಿಯನ್ನು ಕೈಪಿಡಿ ಮಾದರಿಯಲ್ಲಿ ದೊರಕಿಸುವುದು

ಈ) ನಮ್ಮ ವೆಬ್‌ಜಾಲದಲ್ಲಿ ನಮ್ಮ ಕೆಳಗಿನ ನಿಯಮಗಳ ಕುರಿತು ಮಾಹಿತಿ ನೀಡಲಾಗುವುದು

I. ಠೇವಣಿ ಸಂಗ್ರಹ

II. ಚೆಕ್ ಸಂಗ್ರಹಣೆ

III. ಕುಂದುಕೊರತೆ ನಿವಾರಣೆ

IV. ಪರಿಹಾರ

V. ಬಾಕಿ ವಸೂಲಿ ಮತ್ತು ಸೆಕ್ಯೂರಿಟಿಗಳ ಮರುಸ್ವಾಧೀನ

2.1.4. ತಪ್ಪುಗಳಾದಲ್ಲಿ ಶೀಘ್ರವಾಗಿ ಮತ್ತು ಸಹಾನುಭೂತಿಯಿಂದ ವರ್ತಿಸುವುದು.

ಅ) ನಮ್ಮ ಯಾವುದೇ ತಪ್ಪಿನಿಂದಾಗಿ ನಾವು ವಿಧಿಸಿರಬಹುದಾದ ಬ್ಯಾಂಕ್ ಶುಲ್ಕಗಳಿಂದ ನಿಮಗೆ ಹಣಕಾಸಿನ ನಷ್ಟವುಂಟಾಗಿದ್ದರೆ ತಪ್ಪುಗಳನ್ನು ಶೀಘ್ರವಾಗಿ ತಿದ್ದಿಕೊಂಡು ಪರಿಹಾರ ಒದಗಿಸುವ ನಮ್ಮ ನೀತಿಯ ಪ್ರಕಾರ ಅಂತಹ ಬ್ಯಾಂಕಿನ ಶುಲ್ಕಗಳನ್ನು ರದ್ದುಮಾಡುವುದು.

ಆ) ನಿಮ್ಮ ದೂರಿನ ಸ್ವೀಕೃತಿಯನ್ನು ತಿಳಿಸುವುದು ಮತ್ತು ಶೀಘ್ರವಾಗಿ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದು

ಇ) ನೀವು ಇಚ್ಚಿಸಿದಲ್ಲಿ ದೂರನ್ನು ಮುಂದೆ ಕೊಂಡೊಯ್ಯುವುದು ಹೇಗೆಂದು ನಿಮಗೆ ತಿಳಿಸಲಾಗುವುದು.

ಈ) ತಾಂತ್ರಿಕ ವೈಫಲ್ಯದಿಂದ ಉಂಟಾಗುವ ಸಮಸ್ಯೆಗಳ ಪರಿಹಾರಕ್ಕಾಗಿ ಸೂಕ್ತ ಪರ್ಯಾಯಗಳನ್ನು ಒದಗಿಸುವುದು.

2.1.5. ನಿಮ್ಮ ಎಲ್ಲ ವೈಯಕ್ತಿಕ ಹಾಗೂ ವ್ಯಾವಹಾರಿಕ ಮಾಹಿತಿಯನ್ನು ಖಾಸಗಿಯೆಂದು ತಿಳಿದು ಅದನ್ನು ಗೋಪ್ಯವಾಗಿಡುವುದು.

ಪ್ಯಾರಾ 4ರಲ್ಲಿ ಕೊಟ್ಟಿರುವ ವಿಚಾರಗಳಿಗೆ ಅಧೀನವಾಗಿ ನಿಮ್ಮ ಎಲ್ಲ ವೈಯಕ್ತಿಕ ಹಾಗೂ ವ್ಯಾವಹಾರಿಕ ಮಾಹಿತಿಯನ್ನು ಖಾಸಗಿಯೆಂದು ಪರಿಗಣಿಸಿ ಗೋಪ್ಯವಾಗಿಡುತ್ತೇವೆ.

2.1.6. ಕೋಡ್‌ನ ಪ್ರಚಾರಕ್ಕಾಗಿ ನಾವು

ಅ) ನಿಮ್ಮ ಕೋರಿಕೆಯ ಮೇರೆಗೆ ಈಗಾಗಲೆ ಇರುವ ಗ್ರಾಹಕರಾದ ನಿಮಗೆ ಕೋಡ್‌ನ ಒಂದು ಪ್ರತಿಯನ್ನು ಕೌಂಟರಿನಲ್ಲಿ ಅಥವಾ ವಿದ್ಯುನ್ಮಾನ ಸಂವಹನ/ಅಂಚೆಯ ಮೂಲಕ ಉಚಿತವಾಗಿ ಕೊಡುವುದು.

ಆ) ಕ್ರೆಡಿಟ್ ಸೌಲಭ್ಯಗಳನ್ನು ನೀಡಿದಾಗ ಎಲ್ಲ ಹೊಸ ಗ್ರಾಹಕರಿಗೂ ಕೋಡ್‌ನ ಒಂದು ಪ್ರತಿಯನ್ನು ಅವರು ಕೋರಿದಾಗ ಉಚಿತವಾಗಿ ಕೊಡುವುದು.

ಇ) ಪ್ರತಿ ಶಾಖೆಯಲ್ಲಿ ಮತ್ತು ನಮ್ಮ ಜಾಲತಾಣದಲ್ಲಿ ಸಂಹಿತೆಯನ್ನು ದೊರಕುವಂತೆ ಮಾಡುವುದು.

ಈ) ಕೋಡ್ ಬಗ್ಗೆ ಪ್ರಸ್ತುತ ಮಾಹಿತಿಯನ್ನು ನೀಡಲು ಮತ್ತು ಕೋಡನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ನಮ್ಮ ಸಿಬ್ಬಂದಿ ಪ್ರಶಿಕ್ಷಿತರಾಗಿದ್ದಾರೆ ಎಂದು ಖಾತರಿ ಕೊಡುವುದು.

ಉ) ಕೋಡ್ ಮತ್ತು ಅದರ ನಿಬಂಧನೆಗಳನ್ನು ಕುರಿತಂತೆ ಗ್ರಾಹಕರ ತಿಳುವಳಿಕೆಯನ್ನು ಹೆಚ್ಚಿಸಲು ಬೇರೆ ಕ್ರಮಗಳನ್ನು ಕೈಗೊಳ್ಳುವುದು

2.1.7. ಭೇದಭಾವರಹಿತವಾದ ನೀತಿಯನ್ನು ಸ್ವೀಕರಿಸಿ ಅದನ್ನು ಅನುಷ್ಠಾನಕ್ಕೆ ತರುವುದು.

ಉದ್ದಿಮೆಯ ಪ್ರವರ್ತಕ/ಮಾಲಿಕ/ಪಾಲುದಾರರನ್ನು ವಯಸ್ಸು, ಜನಾಂಗ, ಲಿಂಗ, ವೈವಾಹಿಕ ಸ್ಥಿತಿ, ಧರ್ಮ ಅಥವಾ ಅಂಗವಿಕಲತೆಯ ಆಧಾರದಮೇಲೆ ಭೇದಭಾವ ಮಾಡುವುದಿಲ್ಲ.

3. ಮಾಹಿತಿ

ನೀವು ಈ ಕೆಳಗಿನ ಯಾವುದೇ ಒಂದು ಅಥವಾ ಇತರ ಮಾರ್ಗಗಳ ಮೂಲಕ ಬಡ್ಡಿ ದರಗಳು, ಏಕಸಮಾನ ಶುಲ್ಕ ಮತ್ತು ಇತರ ಶುಲ್ಕಗಳ ವಿಚಾರವಾಗಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಅ) ನಮ್ಮ ಶಾಖೆಗಳ ಅಥವಾ ಸಹಾಯ ವಾಣಿಗಳನ್ನು ಸಂಪರ್ಕಿಸುವುದರ ಮೂಲಕ
ಆ) ನಮ್ಮ ಜಾಲತಾಣದ ಮೂಲಕ
ಇ) ನಮ್ಮ ಅಧಿಕೃತ ಸಿಬ್ಬಂದಿ / ಸಹಾಯ ಡೆಸ್ಕ್‌ನ ಸಂಪರ್ಕದಿಂದ
ಈ) ಶಾಖೆಗಳು ಹಾಗೂ ಜಾಲತಾಣದಲ್ಲಿ ಲಭ್ಯವಿರುವ ದರ ಸೂಚಿಯನ್ನು ನೋಡಿ (ಪ್ಯಾರಾ 3.3 ನೋಡುವುದು)

3.1 ಈ ಕೆಳಗಿನ ಸೇವೆಯನ್ನು ನಾವು ನಿಮಗೆ ಒದಗಿಸುತ್ತೇವೆ:

ಅ) ಎಮ್.ಎಸ್.ಇ.ಗಳಿಗೆ ನಮ್ಮಿಂದ ವಿಶೇಷವಾಗಿ ಕೊಡಮಾಡುವ ಎಲ್ಲ ಯೋಜನೆಗಳ ವಿವರಗಳನ್ನು ನೀಡುತ್ತೇವೆ.
ಆ) ನಮ್ಮ ಸಾಲ ಸೌಲಭ್ಯಗಳು ಮತ್ತು ಉತ್ಪನ್ನಗಳ (ಉದಾ: ನಗದು ಸಾಲ, ಅವಧಿ ಸಾಲ, ಬಿಲ್ಲುಗಳ ಡಿಸ್ಕೌಂಟ್ / ಖರೀದಿ, ಗ್ಯಾರಂಟಿಗಳು, ನಗದು ಪತ್ರಗಳು ಮತ್ತು ನಮ್ಮ ಶುಲ್ಕ ಹಾಗೂ ದರಗಳು ಇತ್ಯಾದಿ) ಬಗ್ಗೆ ಮಾಹಿತಿ ನೀಡುತ್ತೇವೆ.
ಇ) ನೀವು ಆಯ್ಕೆ ಮಾಡಿಕೊಳ್ಳುವ ಉತ್ಪನ್ನ ಮತ್ತು ಸೇವೆಯು ನಿಮ್ಮ ಅಗತ್ಯಕ್ಕೆ ತಕ್ಕಂತೆ ಅನುಗುಣವಾಗಿರುವಂತೆ ಪ್ರಯತ್ನಿಸುತ್ತೇವೆ.
ಈ) ಒಂದಕ್ಕಿಂತ ಹೆಚ್ಚಿನ ಮಾರ್ಗದ ಮೂಲಕ ನಾವು ಉತ್ಪನ್ನ ಮತ್ತು ಸೇವೆಗಳನ್ನು ನೀಡುತ್ತಿದ್ದರೆ (ಉದಾ: ಎಟಿಎಮ್, ಇಂಟರ್‌ನೆಟ್, ಫ಼ೋನ್ ಮೂಲಕ, ಶಾಖೆಗಳಲ್ಲಿ ಮತ್ತು ಇತರ) ಆ ಬಗ್ಗೆ ಹೇಳುತ್ತೇವೆ ಮತ್ತು ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುವುದು ಹೇಗೆ ಎನ್ನುವುದನ್ನು ನಿಮಗೆ ತಿಳಿಸುತ್ತೇವೆ.
ಉ) ಕಾನೂನಿನ, ನಿಯಾಮಕ ಮತ್ತು ಆಂತರಿಕ ನೀತಿಗತ ಅಗತ್ಯಗಳನ್ನು ಪೂರೈಸುವ ಸಲುವಾಗಿ ನಿಮ್ಮ ಗುರುತು ಮತ್ತು ವಿಳಾಸವನ್ನು ಸಾಬೀತು ಪಡಿಸುವುದಕ್ಕಾಗಿ ನಮಗೆ ನಿಮ್ಮಿಂದ ಯಾವ ಮಾಹಿತಿ ಬೇಕು ಎನ್ನುವುದನ್ನು ತಿಳಿಸುತ್ತೇವೆ.

3.2 ಬಡ್ಡಿ ದರಗಳು

ನಾವು ಈ ಕೆಳಗಿನವುಗಳ ಬಗ್ಗೆ ಮಾಹಿತಿ ನೀಡುತ್ತೇವೆ:
ಅ. ನಿಮ್ಮ ಠೇವಣಿ ಮತ್ತು ಸಾಲ ಖಾತೆಗಳಿಗೆ ಅನ್ವಯವಾಗುವ ಬಡ್ಡಿದರಗಳು
ಆ. ನಿಗದಿತ ಬಡ್ಡಿ ದರ ಇದ್ದಾಗ ಸಾಲದ ಒಪ್ಪಂದ ಮತ್ತು ಅದು ಯಾವ ತಾರೀಖಿನಿಂದ ಜಾರಿಗೆ ಬರುವುದೆಂಬುದರ ಬಗ್ಗೆ ಮತ್ತು ಬಡ್ಡಿ ದರವನ್ನು ಮರು ನಿಗದಿ ಮಾಡುವಂತಿದ್ದಲ್ಲಿ ಅದರ ವಿವರಗಳು.
ಇ. ಅನಿಗದಿತ ಬಡ್ಡಿ ದರವಿರುವ ಸಾಲಗಳ ಸಂಬಂಧದಲ್ಲಿ, ನಿಮ್ಮ ಅನಿಗದಿತ ಬಡ್ಡಿದರವು ಯಾವ ಸೂಚ್ಯ ದರಕ್ಕೆ ಲಗತ್ತಿಸಲಾಗುತ್ತದೆ ಮತ್ತು ನಿಮ್ಮ ಸಾಲದ ಮೇಲೆ ಯಥಾರ್ತ ಬಡ್ಡಿದರವನ್ನು ನಿರ್ಧರಿಸುವಾಗ ಅನ್ವಯ ದರಕ್ಕೆ ಪ್ರೀಮಿಯಂ ಅಥವಾ ಸೋಡಿ ಅನ್ವಯವಾಗುತ್ತದೆ.
ಈ. ನಿಮ್ಮ ಸಾಲವನ್ನು ನಿಗದಿತ ದರದಿಂದ ಅನಿಗದಿತ ದರಕ್ಕೆ ಅಥವಾ ಅನಿಗದಿತ ದರದಿಂದ ನಿಗದಿತ ದರಕ್ಕೆ ಹಾಗೂ ಅಂತಹ ಸಂದರ್ಭದಲ್ಲಿ ಅನ್ವಯವಾಗುವ ಶುಲ್ಕಗಳು
ಉ. ನಿಮ್ಮ ಠೇವಣಿಗಳಿಗೆ ನಾವು ಯಾವ ಅವಧಿಯಲ್ಲಿ ಬಡ್ಡಿಯನ್ನು ಸಂದಾಯ ಮಾಡುತ್ತೇವೆ ಅಥವಾ ನಿಮ್ಮ ಸಾಲದ ಖಾತೆಗಳಿಗೆ ಬಡ್ಡಿಯನ್ನು ವಿಧಿಸಲಾಗುತ್ತದೆ
ಊ. ನಿಮ್ಮ ಠೇವಣಿ ಮತ್ತು ಸಾಲದ ಖಾತೆಗಳಿಗೆ ಬಡ್ಡಿಯನ್ನು ಹೇಗೆ ಅನ್ವಯಿಸುತ್ತೇವೆ ಮತ್ತು ಸಾಲದ ಖಾತೆಗಳಿಗೆ ಬಡ್ಡಿಯನ್ನು ಹೇಗೆ ಲೆಕ್ಕ ಹಾಕುತ್ತೇವೆ.

3.2.1 ಬಡ್ಡಿ ದರಗಳಲ್ಲಿ ಬದಲಾವಣೆಗಳು

ಈ ಕೆಳಗೆ ಸೂಚಿಸಿರುವ ಯಾವುದಾದರೂ ಸಾಧನಗಳ ಮೂಲಕ ನಮ್ಮ ಸಾಲ ಉತ್ಪನ್ನಗಳ ಬಡ್ಡಿ ದರಗಳಲ್ಲಿ ಬದಲಾವಣೆಗಳನ್ನು ನಿಮಗೆ ತಿಳಿಸುತ್ತೇವೆ. ಅಂತೆಯೇ, ಅನಿಗದಿತ ಬಡ್ಡಿ ದರವನ್ನು ಲಗತ್ತಿಸಲಾಗಿರುವ ಅನ್ವಯ ದರದಲ್ಲಿನ ಬದಲಾವಣೆಗಳನ್ನು ತೀರ್ಮಾನ ಕೈಗೊಂಡ ಎರಡು ವಾರಗಳೊಳಗಾಗಿ ತಿಳಿಸಲಾಗುತ್ತದೆ.

i. ಪತ್ರ
ii. ಇ–ಮೇಲ್
iii. ಎಸ್.ಎಂ.ಎಸ್

ಈ ಮಾಹಿತಿಯನ್ನು ನಮ್ಮ ಶಾಖೆಗಳ ಸೂಚನಾ ಫಲಕಗಳ ಮೇಲೆ ಹಾಗೂ ನಮ್ಮ ವೆಬ್ ತಾಣದಲ್ಲಿ ಪ್ರಕಟಿಸಲಾಗುತ್ತದೆ.

3.3. ಸೇವಾ ಶುಲ್ಕಗಳ ಪಟ್ಟಿ

3.3.1 ಶುಲ್ಕ ಮತ್ತು ದರಗಳು

ಅ. ನೀವು ಆಯ್ಕೆ ಮಾಡಿಕೊಂಡ ಉತ್ಪನ್ನಗಳು ಮತ್ತು ಸೇವೆಗಳಿಗೆ ಅನ್ವಯವಾಗುವ ಎಲ್ಲ ದರಗಳನ್ನೂ ನಿಮಗೆ ತಿಳಿಸುತ್ತೇವೆ.

ಆ) ನಾವು ಒದಗಿಸುವ ವಿವಿಧ ರೀತಿಯ ಸೇವೆಗಳಿಗಾಗಿ ವಿಧಿಸುವ ಶುಲ್ಕ ಮತ್ತು ವೆಚ್ಚಗಳ ದರವನ್ನು ಬ್ಯಾಂಕಿನ ಬೋರ್ಡ್ ಅಥವ ಸಂಬಂಧಿಸಿದ ಮಂಡಳಿ ನಿಗದಿಪಡಿಸಿದೆ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳಲು ಮಂಡಳಿಗೆ ಅಧಿಕಾರವನ್ನು ನೀಡಲಾಗಿದೆ. ಮತ್ತು ಈ ನಿರ್ಧಾರವು ಯಾವುದೇ ಗ್ರಾಹಕರಿಗೂ ತಾರತಮ್ಯವನ್ನು ತೋರಿಸದೆ, ನ್ಯಾಯಯುತವಾಗಿರುವಂತೆ ಇರುತ್ತದೆ.

ಇ) ನಮ್ಮ ಟಾರಿಫ಼್ ಪಟ್ಟಿ ನಮ್ಮ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ನಿಮ್ಮ ಅವಗಾಹನೆಗೆ ಇದರ ಪ್ರತಿ ನಮ್ಮ ಎಲ್ಲ ಶಾಖೆಗಳಲ್ಲಿ ನಿಮಗೆ ದೊರಕುತ್ತದೆ.

ಈ) ನಮ್ಮ ವೆಬ್‌ಸೈಟ್‌ನಲ್ಲಿ ಹಾಗೂ ನಮ್ಮ ಶಾಖೆಗಳಲ್ಲಿ, ಉಚಿತವಾಗಿ ನೀಡುವ ಸೇವೆಗಳ ಪಟ್ಟಿ ಲಭ್ಯವಿರುತ್ತದೆ.

ಉ) ನೀವು ಆಯ್ಕೆ ಮಾಡಿಕೊಂಡ ಸೇವೆ / ಉತ್ಪನ್ನಗಳ ಷರತ್ತುಗಳು ಮತ್ತು ನಿಬಂಧನೆಗಳ ಪಾಲಿಸದಿರುವಿಕೆ / ಉಲ್ಲಂಘನೆಗಳಿಗೆ ವಿಧಿಸುವ ದಂಡಗಳ ಬಗ್ಗೆಯೂ ನಾವು ನಿಮಗೆ ಮಾಹಿತಿ ನೀಡುತ್ತೇವೆ.

ಊ) ಬ್ಯಾಂಕ್/ ಶಾಖೆಯು ತನ್ನ ತಂತ್ರಜ್ಞಾನವನ್ನು ಉನ್ನತಗೊಳಿಸಲು ನಾವು ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ.

3.3.2 ಶುಲ್ಕ ಮತ್ತು ದರಗಳಲ್ಲಿ ಬದಲಾವಣೆಗಳು

ನಮ್ಮ ಉತ್ಪನ್ನಗಳ ಮೇಲಿನ ಶುಲ್ಕಗಳನ್ನು ಅಥವಾ ಬಡ್ಡಿ ದರಗಳನ್ನು ನಾವು ಬದಲಾಯಿಸಿದಾಗ ಅಥವಾ ಹೊಸ ಶುಲ್ಕಗಳನ್ನು ವಿಧಿಸಿದಾಗ, ಲೆಕ್ಕ ವಿವರಣ ಪಟ್ಟಿ / ಪತ್ರ/ಈಮೇಲ್/ ಎಸ್ ಎಮ್ ಎಸ್/ಶಾಖೆಗಳಲ್ಲಿ ನೊಟೀಸ್ ಬೋರ್ಡ್ ಮುಖಾಂತರ, ಹೊಸ ದರಗಳು ಜಾರಿಗೆ ಬರುವ ಒಂದು ತಿಂಗಳು ಮುಂಚಿತವಾಗಿ ನಿಮಗೆ ಸೂಚನೆ ನೀಡುತ್ತೇವೆ. ಈ ಮಾಹಿತಿಯನ್ನು ನಮ್ಮ ವೆಬ್ ತಾಣದಲ್ಲಿಯೂ ಪ್ರಕಟಿಸುತ್ತೇವೆ

3.4 ಷರತ್ತುಗಳು ಮತ್ತು ನಿಬಂಧನೆಗಳು

ಅ. ನೀವು ನಮ್ಮಿಂದ ಕೇಳಿದ ಸೇವೆಗೆ ಸಂಬಂಧಪಟ್ಟಂತೆ ಪ್ರಸ್ತುತವಾಗುವ ಷರತ್ತುಗಳು ಮತ್ತು ಕರಾರುಗಳ ಬಗ್ಗೆ ನಿಮಗೆ ಸೂಚನೆ ನೀಡುತ್ತೇವೆ.

ಆ. ಎಲ್ಲ ಷರತ್ತುಗಳು ಮತ್ತು ಕರಾರುಗಳು ನಿಷ್ಪಕ್ಷವಾಗಿರುತ್ತವೆ ಮತ್ತು ವಿಶೇಷವಾಗಿ ಸಂಬಂಧಪಟ್ಟ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮತ್ತು ಋಣಗಳ ಸ್ಪಷ್ಟ ಉಲ್ಲೇಖವಿರುತ್ತದೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಸರಳವಾದ ಭಾಷೆಯಲ್ಲಿ ಇರುತ್ತದೆ.

3.4.1 ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳು

ಅ) ಕೆಳಗೆ ನಮೂದಿಸಲಾದ ಯಾವುದಾದರೂ ಒಂದು ಅಥವಾ ಹಲವು ಪ್ರಕಾರಗಳಲ್ಲಿ ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಅವು ಜಾರಿಯಾಗುವ ಒಂದು ತಿಂಗಳಿಗೆ ಮುನ್ನ ತಿಳಿಸುತ್ತೇವೆ.

I. ಪತ್ರ
II. ಲೆಕ್ಕಪತ್ರಗಳ ಯಾದಿ
III. ಕ್ಷಿಪ್ರ ಸಂದೇಶ (ಎಸ್‌ಎಂಎಸ್) ಅಥವ
IV. ಈ–ಮೇಲ್

ಸಾಮಾನ್ಯವಾಗಿ ಎಲ್ಲ ಗ್ರಾಹಕರಿಗೂ ಬದಲಾವಣೆಯು ಅನ್ವಯವಾಗುವಂತಿದ್ದರೆ ಅಂತಹ ಮಾಹಿತಿಯನ್ನು ನಮ್ಮ ಶಾಖೆಗಳ ಸೂಚನಾ ಫಲಕಗಳು ಮತ್ತು ನಮ್ಮ ವೆಬ್ ತಾಣದ ಮೂಲಕ ಸಹ ತಿಳಿಯಪಡಿಸಲಾಗುತ್ತದೆ.

ಆ) ಸಾಮಾನ್ಯವಾಗಿ ಷರತ್ತು ಮತ್ತು ನಿಬಂಧನೆಗಳಲ್ಲಿ ಆಗುವ ಬದಲಾವಣೆಗಳನ್ನು ಒಂದು ತಿಂಗಳ ಮುನ್ಸೂಚನೆ ನೀಡಿ ಜಾರಿಗೆ ತರಲಾಗುತ್ತದೆ.

ಇ) ಸೂಚನೆಯಿಲ್ಲದೇ ನಾವು ಯಾವುದೇ ಬದಲಾವಣೆಯನ್ನು ಮಾಡಿದ್ದರೆ, 30 ದಿನಗಳೊಳಗಾಗಿ ಬದಲಾವಣೆಯ ಅಧಿಸೂಚನೆಯನ್ನು ನೀಡುತ್ತೇವೆ. ಇಂತಹ ಬದಲಾವಣೆ ನಿಮ್ಮ ಪಾಲಿಗೆ ಪ್ರತಿಕೂಲವಾಗಿದ್ದರೆ, ಸೂಚನಾ ಪತ್ರ ನೀಡಿದ 60

ದಿನಗಳ ಒಳಗೆ ಯಾವುದೇ ಅತಿರಿಕ್ತ ಶುಲ್ಕ ಯಾ ಬಡ್ಡಿಯನ್ನು ನೀಡದೇ, ಪೂರ್ವಸೂಚನೆಯನ್ನೂ ಕೊಡದೆಯೇ, ನಿಮ್ಮ ಖಾತೆಯನ್ನು ಮುಚ್ಚಬಹುದು ಅಥವಾ ಬೇರಾವುದೇ ಅರ್ಹ ಖಾತೆಗೆ ಬದಲಾಯಿಸಿಕೊಳ್ಳಬಹುದು. ಅದಕ್ಕೆ ಪರಿಷ್ಕೃತ ಶುಲ್ಕ ಅಥವಾ ಬಡ್ಡಿ ತೆರಬೇಕಾಗಿಲ್ಲ.

4. ಖಾಸಗಿತನ ಮತ್ತು ಗೋಪ್ಯತೆ

ಅ) ನಾವು ನಿಮ್ಮ ಎಲ್ಲ ವೈಯಕ್ತಿಕ ಮಾಹಿತಿಯನ್ನು ಖಾಸಗಿಯಾಗಿ ಮತ್ತು ಗೌಪ್ಯವಾಗಿ ಇಡುತ್ತೇವೆ (ನೀವು ನಮ್ಮ ಗ್ರಾಹಕರಾಗಿ ಮುಂದುವರಿಯದೇ ಇದ್ದಾಗ್ಯೂ). ನಿಮ್ಮ ಗುಂಪಿನಲ್ಲಿರುವ ಇತರ ಕಂಪನಿಗಳೂ ಸೇರಿದಂತೆ, ಬೇರೆ ಯಾರಿಗೂ ನಾವು ನಿಮ್ಮ ಖಾತೆಗಳಿಗೆ ಸಂಬಂಧಪಟ್ಟ ಮಾಹಿತಿ ಅಥವಾ ದತ್ತಾಂಶವನ್ನು– ಅದನ್ನು ನೀವೇ ಕೊಟ್ಟಿದ್ದರೂ ಯಾ ಹಾಗಲ್ಲದಿದ್ದರೂ– ಬಹಿರಂಗಗೊಳಿಸುವದಿಲ್ಲ. ಇದಕ್ಕೆ ಕೆಳಗಿನವು ಅಪವಾದಗಳು:

5. ಕಾನೂನುರೀತ್ಯ ಇಲ್ಲವೇ ಬ್ಯಾಂಕಿಂಗ್ ನಿಯಂತ್ರಕರು ಸೂಚಿಸಿದಾಗ ಮಾಹಿತಿಯನ್ನು ಬಹಿರಂಗ ಪಡಿಸಬೇಕಾದರೆ
6. ಮಾಹಿತಿಯನ್ನು ಬಹಿರಂಗಪಡಿಸುವುದು ಸಾರ್ವಜನಿಕರ ವಿಚಾರದಲ್ಲಿ ನಮ್ಮ ಕರ್ತವ್ಯವಾಗಿದ್ದರೆ
7. ನಾವು ನಮ್ಮ ಹಿತರಕ್ಷಣೆಗಾಗಿ ಅಥವ ಸನ್ನಿವೇಶವನ್ನು ಸೌಮ್ಯಗೊಳಿಸಲು ವಿವೇಚನೆ ಬಳಸಿ ಮಾಹಿತಿಯನ್ನು ನೀಡಬೇಕಾದರೆ (ಉದಾ: ವಂಚನೆಯನ್ನು ತಡೆಗಟ್ಟಲು) ಆದರೆ, ಈ ಮಾಹಿತಿಯನ್ನು ನಾವು ಮಾರ್ಕೆಟಿಂಗ್ ಉದ್ದೇಶಗಳಿಗಾಗಿ, ನಮ್ಮ ಗುಂಪಿನ ಇತರ ಕಂಪನಿಗಳೂ ಸೇರಿದಂತೆ, ಬೇರೆ ಯಾರಿಗೂ ನಿಮ್ಮ ಬಗ್ಗೆ ಅಥವಾ ನಿಮ್ಮ ಖಾತೆಗಳ ಬಗ್ಗೆ (ನಿಮ್ಮ ಹೆಸರು ಮತ್ತು ವಿಳಾಸ ಸೇರಿದಂತೆ) ಮಾಹಿತಿಯನ್ನು ನೀಡಲು ಇದನ್ನೊಂದು ನಿಮಿತ್ತವಾಗಿ ಬಳಸಿಕೊಳ್ಳುವದಿಲ್ಲ.
8. ನೀವೇ ಮಾಹಿತಿಯನ್ನು ಬಹಿರಂಗಗೊಳಿಸುವಂತೆ ನಮಗೆ ನಿಮ್ಮ ಅನುಮತಿ ಇದ್ದರೆ.

ಅ) ನೀವು ನಮಗೆ ನಿರ್ದಿಷ್ಟವಾದ ಅಧಿಕಾರ ನೀಡದೆ ಇದ್ದರೆ ನಮ್ಮ ಸಹಿತವಾಗಿ ಯಾರಿಗೂ ನಾವು ಮಾರ್ಕೆಟಿಂಗ್ ಉದ್ದೇಶಗಳ ಸಲುವಾಗಿ ನಿಮ್ಮ ವೈಯಕ್ತಿಕ ಮಾಹಿತಿಯ ಬಳಕೆಗೆ ಆಸ್ಪದ ನೀಡುವುದಿಲ್ಲ.

4.1. ಉದ್ದರಿ ಮಾಹಿತಿ ಸಂಸ್ಥೆಗಳು

ಅ) ಉದ್ದರಿ ಸೌಲಭ್ಯಕ್ಕಾಗಿ ನೀವು ಅರ್ಜಿ ಸಲ್ಲಿಸಿದಾಗ ಉದ್ದರಿ ಮಾಹಿತಿ ಸಂಸ್ಥೆಗಳ ಪಾತ್ರ, ಹಾಗೆಯೇ ಅಂತಹ ಸಂಸ್ಥೆಗಳೊಡನೆ ನಾವಿರಿಸಿಕೊಳ್ಳುವ ವ್ಯವಹಾರ ಮತ್ತು ನಿಮಗೆ ಉದ್ದರಿ ಸೌಲಭ್ಯಗಳನ್ನು ನೀಡುವುದರ ಬಗೆಗಿನ ನಮ್ಮ ತೀರ್ಮಾನಕ್ಕೆ ಆ ಸಂಸ್ಥೆಗಳು ನೀಡುವ ಮಾಹಿತಿಯ ಪರಿಣಾಮವನ್ನು ನಿಮಗೆ ವಿವರಿಸುತ್ತೇವೆ.

ಆ) ನಮ್ಮಿಂದ ನೀವು ಉದ್ದರಿ ಸೌಲಭ್ಯ ಪಡೆದಾಗ ಸಾಲದ ವಿವರಗಳನ್ನು ನಾವು ಸಿಐಸಿಗಳಿಗೆ ವರದಿ ಸಲ್ಲಿಸುತ್ತೇವೆ.

ಇ) ನಮ್ಮಿಂದ ಪಡೆಯಲಾದ ಅಂದಂದಿನ ಉದ್ದರಿ ಮಾಹಿತಿಯ ವಿವರಗಳನ್ನು ಆಗಿಂದಾಗ್ಗೆ ನಿಗದಿತ ಸಮಯಗಳಲ್ಲಿ ಸಿಐಸಿಗಳಿಗೆ ವರದಿ ಮಾಡುತ್ತೇವೆ.

ಈ) ನಾವು ಸಿಐಸಿಗೆ ಸಲ್ಲಿಸುವ ವರದಿಯಲ್ಲಿ ನೀವು ನಮಗೆ ನೀಡಬೇಕಾದ ಬಾಕಿ ವಿವರಗಳೂ ಒಳಗೊಂಡಿರುತ್ತದೆ. ವಿವರಗಳಲ್ಲಿ ಈ ಅಂಶಗಳೂ ಸೇರಿರುತ್ತವೆ:

I. ನೀವು ಪಾವತಿಸಬೇಕಾದ ಬಾಕಿಯಲ್ಲಿ ಹಿಂದುಳಿದಿರುವುದು
II. ತೆಗೆದುಕೊಂಡ ಹಣ ತಕರಾರಿನಲ್ಲಿರುವುದು

ಉ) ಒಂದೊಮ್ಮೆ ನಿಮ್ಮ ಖಾತೆ ಸುಸ್ತಿಯಾಗಿ ಬಳಿಕ ಮತ್ತೆ ಕ್ರಮಬದ್ಧಗೊಳಿಸಿದ್ದಲ್ಲಿ ಈ ಪರಿಷ್ಕೃತ ಮಾಹಿತಿಯನ್ನು ಮುಂಬರುವ ಮಾಸಿಕ ವರದಿಯಲ್ಲಿ ಸಿಐಸಿಗೆ ಒದಗಿಸಲಾಗುವುದು

ಊ) ನಿಮ್ಮ ಖಾತೆಯ ವಿವರಗಳನ್ನು– ಅದರಲ್ಲೂ, ನಿಮ್ಮ ಖಾತೆ ಕೆಲವು ಸಮಯ ಸಬ್–ಸ್ಟ್ಯಾಂಡರ್ಡ್ ಸ್ಥಿತಿಯಿಂದ ಸ್ಟ್ಯಾಂಡರ್ಡ್ ಸ್ಥಿತಿಗೆ ಮರಳಿದಾಗ ಮತ್ತು/ಅಥವ ನಮಗೆ ತೃಪ್ತಿದಾಯಕವಾಗುವಂತೆ ನಿಮ್ಮ ಖಾತೆಯನ್ನು ನಿಯಮಿತಗೊಳಿಸಿದಾಗ/ಇತ್ಯರ್ಥಪಡಿಸಿದ ಸಂದರ್ಭಗಳಲ್ಲಿ– ಮಾಸಿಕವಾಗಿ ಉದ್ದರಿ ಮಾಹಿತಿ ಸಂಸ್ಥೆಗಳಿಗೆ ಒದಗಿಸಲಾಗುವುದು.

ಋ) ನಿಗದಿಗೊಳಿಸಲಾದ ಶುಲ್ಕವನ್ನು ನೀಡಿದರೆ ನೀವು ಕೇಳಿದಾಗ ಸಿಐಸಿಯಿಂದ ನಾವು ಪಡೆದುಕೊಂಡ ಉದ್ದರಿ ಮಾಹಿತಿಯ ಒಂದು ಪ್ರತಿಯನ್ನು ನಿಮಗೆ ನೀಡುತ್ತೇವೆ.

ಋ) ಸಿಐಸಿ ಬಳಿ ಇರುವ ಪ್ರತಿಕೂಲ ಉದ್ದರಿ ಮಾಹಿತಿಯ ದಾಖಲೆಯಿಂದಾಗಿ ನಿಮ್ಮ ಮೇಲುಂಟಾಗುವ ದುಷ್ಪರಿಣಾಮಗಳನ್ನು ನಿಮಗೆ ವಿವರಿಸಿ ಹೇಳುತ್ತೇವೆ. ನಮ್ಮಿಂದ ಅಥವಾ ಇತರೆ ಬೇರೆ ಬ್ಯಾಂಕುಗಳಿಂದ ಭವಿಷ್ಯದಲ್ಲಿ ನೀವು ಉದ್ದರಿ ಪಡೆಯುವ ಸಾಮರ್ಥ್ಯದ ಮೇಲೆ ಆ ದಾಖಲೆಗಳು ಬೀರುವ ಪ್ರಭಾವವನ್ನು ವಿವರಿಸುತ್ತೇವೆ. ಏಕಕಾಲಿಕ ಇತ್ಯರ್ಥ ಪ್ರಕಾರ ನೀವು ಇತ್ಯರ್ಥ ಮಾಡಿಕೊಂಡು ನಮ್ಮಲ್ಲಿರುವ ನಿಮ್ಮ ಖಾತೆಯನ್ನು ಮುಚ್ಚಿದಾಗ ಮುಂದೆ ಸಾಲ ಪಡೆಯುವಲ್ಲಿ ನಿಮಗಾಗುವ ದುಷ್ಪರಿಣಾಮಗಳನ್ನು ವಿವರಿಸುತ್ತೇವೆ.

5. ಸಾಲ ನೀಡುವಿಕೆ

ಅ) ಸಾಲಕ್ಕಾಗಿ ನಿಮ್ಮ ಅರ್ಜಿಯನ್ನು ವಿಲೇವಾರಿ ಅಥವಾ ಯಾವುದೇ ಹಣಕಾಸಿನ ನೆರವಿಗೆ ಸಂಬಂಧಿಸಿದ ನಮ್ಮ ಸಾಲ ನೀತಿಯು, ರಾಷ್ಟ್ರೀಯ ನೀತಿಯ ಧ್ಯೇಯಗಳು ಮತ್ತು ಸ್ಫೂರ್ತಿ ಮನೋಭಾವವನ್ನು ಮತ್ತು ನಿಯಂತ್ರಣ ಸೂಚನೆಗಳನ್ನು ಪ್ರತಿಫಲಿಸುತ್ತದೆ. ಮಾಹಿತಿಯನ್ನು ಏಕಗವಾಕ್ಷಿ ವ್ಯವಸ್ಥೆಯ ಮೂಲಕ ಸೌಲಭ್ಯಗಳನ್ನು ಒದಗಿಸಲು ನಾವು ಪ್ರಯತ್ನಿಸುತ್ತೇವೆ.

ಆ) ಅತಿ ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆದಾರರ ಸಂಬಂಧಿತ ನೀತಿಯನ್ನು ಅವಗಾಹನೆಗಾಗಿ ಶಾಖೆಯಲ್ಲಿ ತಮಗೆ ದೊರಕುವಂತೆ ಮಾಡುತ್ತೇವೆ. ಕೋರಿಕೆಯ ಮೇರೆಗೆ, ನಾಮ–ಮಾತ್ರ ದರದಲ್ಲಿ ಪ್ರತಿಯು ಲಭ್ಯವಾಗುವಂತೆ ಮಾಡುತ್ತೇವೆ.

ಇ) ನಿಮಗೆ ಅನ್ವಯವಾಗುವಂತಿದ್ದರೆ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆಂದು ಇರುವ ಸಾಲ ಖಾತರಿ ನಿಧಿ ವಿಶ್ವಸ್ಥ ಮಂಡಳಿಯಿಂದ ದೊರಕುವ ಸೌಲಭ್ಯಗಳು, ಅದಕ್ಕಾಗಿ ತಗಲುವ ವೆಚ್ಚ ಮತ್ತು ನಿಯಮಗಳ ಕುರಿತು ಹಾಗೂ ಅವುಗಳ ವಿಶಿಷ್ಟತೆ ಕುರಿತು ಮಾಹಿತಿಯನ್ನು ಒದಗಿಸುತ್ತೇವೆ. ಈ ಸೌಲಭ್ಯವನ್ನು ಎಲ್ಲ ಅರ್ಹ ಬ್ಯಾಂಕುಗಳೂ ಒದಗಿಸಲಿದ್ದು, ಜನಪ್ರಿಯವಾಗಿ ಸಿಜಿಟಿಎಸ್ಎಂಇ ಎಂದು ಗುರುತಿಸಲಾಗುತ್ತದೆ. ಮತ್ತು ಸೇವಾ ವಲಯವೂ ಒಳಗೊಂಡು ಈಗಾಗಲೇ ಇರುವ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಮತ್ತು ಹೊಸದಾಗಿ ಆರಂಭಿಸುವ ಉದ್ಯಮಗಳಿಗೆ ಈ ಸೌಲಭ್ಯ ಒದಗಿಸಲಾಗುವುದು. ಸಂಸ್ಥೆಯು ಗರಿಷ್ಠ ನೂರು ಲಕ್ಷ (ರೂ.100 ಲಕ್ಷಗಳು) ಸಾಲ ಸೌಲಭ್ಯ ಪಡೆಯಬಹುದು. ಚಿಲ್ಲರೆ ಮಾರಾಟ, ಶೈಕ್ಷಣಿಕ ಸಂಸ್ಥೆಗಳು, ತರಬೇತಿ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು ನಿಯಮದಂತೆ ಈ ಸೌಲಭ್ಯವನ್ನು ಪಡೆದುಕೊಳ್ಳಲಾರವು.

ಈ) ನಿಮ್ಮ ಸಾಲವು ಯಾವುದೇ ಬಗೆಯ ಚಾಲ್ತಿಯಲ್ಲಿರುವ ರಿಯಾಯಿತಿ ಸೌಲಭ್ಯಗಳ ಸ್ಕೀಮ್ ಅಡಿಯಲ್ಲಿ ಬರುವಂತಿದ್ದರೆ ಅದರ ವಿಶಿಷ್ಟತೆಯನ್ನು ಬೇರಾವುದಾದರೂ ಉದ್ದರಿ ಖಾತ್ರಿಗೊಳಿಸುವ ಯೋಜನೆಯಲ್ಲಿ ಅಥವಾ/ ಮತ್ತು ನೀವು ತುಂಬಿಕೊಡಬೇಕಾಗುವ ಅಗತ್ಯತೆಗಳನ್ನು ನಿಮಗೆ ತಿಳಿಸಿಹೇಳುತ್ತೇವೆ.

ಉ) ಸಂಭವನೀಯ ಕಡ ಪಡೆಯುವವರು ಹಣಕಾಸು ನಿರ್ವಹಣೆಯಲ್ಲಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ

ಊ) ಎಂಎಸ್ಇ ಗ್ರಾಹಕರೊಂದಿಗೆ ವಿಚಾರ ವಿನಿಮಯ ಮತ್ತು ಸಲಹೆಗಳ ವಿನಿಮಯಕ್ಕಾಗಿ ನಾವು ಕಾಲಕಾಲಕ್ಕೆ ಸಭೆಗಳನ್ನು ಸಂಘಟಿಸುತ್ತೇವೆ

5.1. ಅರ್ಜಿ.

ನಾವು

ಅ) ಉಚಿತ, ಸರಳಗೊಳಿಸಿದ ಸುಲಭವಾಗಿ ಗ್ರಹಿಸಬಲ್ಲ ಸಾಲದ ಅರ್ಜಿ ನಮೂನೆಗಳನ್ನು ಲಭ್ಯಗೊಳಿಸುವೆವು

ಆ) ನೀವು ಸಲ್ಲಿಸಬೇಕಾದ ದಾಖಲೆಗಳ ತಾಳೆ ನೋಡುವ ಪಟ್ಟಿಯ (ಕಾನೂನು ಮತ್ತು ನಿಯಂತ್ರಣಗಳ ಅಗತ್ಯಗಳನ್ನು ಹೊಂದಿದ) ಜತೆಗೆ ಸಾಲದ ಅರ್ಜಿ ಫಾರಂ ಅನ್ನು ಒದಗಿಸುವೆವು. ಇದರಿಂದ ಎಲ್ಲಾ ವಿಧದಲ್ಲೂ ಭರ್ತಿಗೊಳಿಸಿದ ಅರ್ಜಿಯನ್ನು ಸಲ್ಲಿಸಲು ತಮಗೆ ಅನುಕೂಲವಾಗುತ್ತದೆ. ಅಗತ್ಯವಾದಲ್ಲಿ ನಿಮ್ಮ ಸಾಲದ ಅರ್ಜಿ ಫಾರಂ ಅನ್ನು ಭರ್ತಿ ಮಾಡಲು ನಾವು ಸಹಾಯ ಮಾಡುತ್ತೇವೆ.

ಇ) ಅರ್ಜಿ ಫಾರಂ ಅನ್ನು ಒದಗಿಸುವಾಗ ವಾರ್ಷಿಕಗೊಳಿಸಿದ ಬಡ್ಡಿದರವನ್ನೂ ಒಳಗೊಂಡು, ಅನ್ವಯಿಸಬಹುದಾದ ಬಡ್ಡಿದರಗಳು ಕಾರ್ಯಗತಿಗಾಗಿ ಯಾವುದೇ ಶುಲ್ಕ/ದರಗಳು ಇದರಲ್ಲಿ ಪೂರ್ವಪಾವತಿ ಆಯ್ಕೆ ಮತ್ತು ಯಾವುದೇ ದರ ಮತ್ತು ನಿಮ್ಮ ಆಸಕ್ತಿ ಮೇಲೆ ಪರಿಣಾಮ ಬೀರಬಹುದಾದ ಇತರ ವಿಷಯಗಳ ಬಗ್ಗೆ ನಾವು ಮಾಹಿತಿಯನ್ನು ನೀಡುತ್ತೇವೆ. ಇದರಿಂದ ಇತರ ಬ್ಯಾಂಕುಗಳ ದರಗಳು/ಶುಲ್ಕಗಳ ಅರ್ಥಪೂರ್ಣ ಹೋಲಿಕೆಯನ್ನು ಮಾಡಲು ಸಹಾಯಕವಾಗುವುದು ಹಾಗೂ ಸೂಕ್ತ ನಿರ್ಧಾರವನ್ನು ನೀವು ಕೈಗೊಳ್ಳಬಹುದು.

ಈ) ನಿಮ್ಮ ಸಾಲದ ಅರ್ಜಿಯನ್ನು, ಅದು ಖುದ್ದಾಗಿ ನೀಡಿರಲಿ, ಆನ್‌ಲೈನ್ ಮೂಲಕವೇ ಸಲ್ಲಿಕೆಯಾಗಿರಲಿ, ಸ್ವೀಕರಿಸಿದ್ದಕ್ಕೆ ಲಿಖಿತ ರೂಪದಲ್ಲಿ ಸ್ವೀಕೃತಿಯನ್ನು ನೀಡಲಾಗುವುದು. ಹಾಗೂ ಅರ್ಜಿಯನ್ನು ಇತ್ಯರ್ಥಗೊಳಿಸಲು ತೆಗೆದುಕೊಳ್ಳುವ ಸಮಯವನ್ನೂ ಸೂಚಿಸಲಾಗುವುದು

ಉ) ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಸಾಲ ಸೌಲಭ್ಯದ ಅರ್ಜಿಯನ್ನು ಕಾರ್ಯಗತಗೊಳಿಸಲು ಅಗತ್ಯ ಮಾಹಿತಿ ನಮಗೆ ಬೇಕಾದಲ್ಲಿ ಅರ್ಜಿಯನ್ನು ಸ್ವೀಕರಿಸಿದ ಏಳು ಕೆಲಸದ ದಿನಗಳೊಳಗೆ ನಿಮ್ಮನ್ನು ಸಂಪರ್ಕಿಸುತ್ತೇವೆ.

ಊ) ಸಾಲ–ಸೌಲಭ್ಯದ ನವೀಕರಣದ ಸಂದರ್ಭದಲ್ಲಿ, ಖಾತೆಯು ತೃಪ್ತಿದಾಯಕವಾಗಿ ನಿರ್ವಹಿಸಿದ್ದಲ್ಲಿ, ನಮ್ಮ ಬಳಿ ಈಗಾಗಲೇ ಇಲ್ಲದ/ ಅಗತ್ಯವೆನಿಸಿದ ಮಾಹಿತಿಯನ್ನು ಮಾತ್ರ ನಿಮ್ಮಿಂದ ಹೆಚ್ಚುವರಿಯಾಗಿ ಪಡೆಯುತ್ತೇವೆ.

ಋ) ನಮ್ಮಿಂದ ಮಂಜೂರಾದ ಮತ್ತು ನೀವು ಪಡೆಯಲು ಇಚ್ಛಿಸಿರುವ ಸಾಲ/ಕಡ ಸೌಲಭ್ಯದ ಅತಿ ಮುಖ್ಯ ಷರತ್ತು ಮತ್ತು ನಿಬಂಧನೆಗಳನ್ನು ನಾವು ನಿಮಗೆ ನೀಡುತ್ತೇವೆ.

ೠ) ನಿಮ್ಮ ಅರ್ಜಿಯ ಸ್ಥಿತಿಗತಿಯನ್ನು ಆನ್–ಲೈನ್ ಮೂಲಕ ನಿಮಗೆ ತಿಳಿಸಲು ಪ್ರಯತ್ನಿಸುತ್ತೇವೆ.

ಎ) ಸಾಲವು ಮಂಜೂರಾಗಲಿ ಆಗದಿರಲಿ, ರೂ 5 ಲಕ್ಷದವರೆಗಿನ ಸಾಲಕ್ಕೆ ಯಾವುದೇ ಸಂಸ್ಕರಣ ಶುಲ್ಕ ವಿಧಿಸುವುದಿಲ್ಲ.

ಏ) ಐದು ಲಕ್ಷದೊಳಗಿನ ಪರಿಮಿತಿಯ ಸಾಲದ, ಪೂರ್ಣಗೊಂಡ ಮತ್ತು ತಾಳೆನೋಡಿ ಪಟ್ಟಿಯಂತೆ ಎಲ್ಲ ಷರತ್ತುಗಳನ್ನು ಪೂರೈಸಿದ, ಎಲ್ಲ ದಾಖಲೆಗಳನ್ನು ಒದಗಿಸಿದ ನಿಮ್ಮ ಅರ್ಜಿಯನ್ನು, ನೀವು ಅರ್ಜಿ ನೀಡಿದ ದಿನಾಂಕದಿಂದ ಎರಡು ವಾರದೊಳಗೆ ಇತ್ಯರ್ಥಪಡಿಸಲಾಗುವುದು; ಸಾಲವು 5ರಿಂದ 25 ಲಕ್ಷದೊಳಗಿದ್ದಲ್ಲಿ ಮೂರು ವಾರ, 25 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಆರು ವಾರದೊಳಗೆ ಇತ್ಯರ್ಥಪಡಿಸಲಾಗುವುದು.

5.2 ಉದ್ದರಿ ನಿರ್ಧರಣೆ

ಅ). ನಾವು

i). ನಿಮ್ಮ ಅರ್ಜಿಯಲ್ಲಿ ನೀವು ನೀಡಿರುವ ವಿವರಗಳನ್ನು, ನಿಮ್ಮನ್ನು ನಮ್ಮ ಸಿಬ್ಬಂದಿ/ ಈ ಉದ್ದೇಶಕ್ಕಾಗಿ ನಮ್ಮಿಂದ ನೇಮಿಸಲ್ಪಟ್ಟ ಏಜೆನ್ಸಿಗಳಿಂದ ನಿಮ್ಮ ವ್ಯವಹಾರದ ವಿಳಾಸ/ ನಿವಾಸದಲ್ಲಿ ಪರಿಶೀಲಿಸುತ್ತೇವೆ.

ii). ನಿಮಗೆ ಯಾವುದೇ ಹಣವನ್ನು ಸಾಲವಾಗಿ ನೀಡುವ ಮುನ್ನ ಅಥವಾ ಓವರ್ ಡ್ರಾಫ್ಟ್ ಅನ್ನು ಹೆಚ್ಚಿಸುವಾಗ ಅಥವಾ ಪಡೆಯುವ ಮಿತಿ/ಮಿತಿಗಳನ್ನು ಹೆಚ್ಚಿಸುವಾಗ ವಿವರವಾದ ಸೂಕ್ತ ಶ್ರಮಶೀಲತೆ ಹಾಗೂ ಮೌಲ್ಯ ನಿರ್ಧರಣೆಯ ಮೂಲಕ ನಿಮ್ಮ ಸಾಲದ ಅರ್ಜಿಯನ್ನು ಸೂಕ್ತ ರೀತಿಯಲ್ಲಿ ಅಂದಾಜು ಮಾಡಲಾಗುವುದು.

iii). ನೀವು ಮಾಡಿರುವ ಮುನ್ನಂದಾಜಿನ ಸಮರ್ಥನೆಯ ಬಗ್ಗೆ ನಮ್ಮನ್ನು ನಾವು ತೃಪ್ತಿಗೊಳಿಸಿಕೊಳ್ಳುತ್ತೇವೆ.

(iv) ನಿಮ್ಮ ಸಾಲದ ಅವಶ್ಯಕತೆಯನ್ನು ಮೌಲ್ಯಮಾಪನ ಮಾಡುವಾಗ ನಿಮ್ಮ ಋತು–ಆಧಾರಿತ/ ವ್ಯವಹಾರ ಚಕ್ರ ಅಂದಾಜಿಸಿ, ಅಗತ್ಯವಿರುವೆಡೆ, ಪ್ರತ್ಯೇಕ ಗರಿಷ್ಠ ಅಥವ ಇತರೆ ಸಾಲ ಮಿತಿಯನ್ನು ನಿಗದಿಪಡಿಸಲಾಗುವುದು.

ಆ). ಈ ಕೆಳಗಿನ ವಿಷಯವನ್ನು ಗಮನಿಸುವುದನ್ನೂ ಸೇರಿದಂತೆ ಅಂದಾಜುಮಾಡಲಾಗುವುದು.

i). ಸಾಲ ಪಡೆಯುವಿಕೆ ಉದ್ದೇಶವೂ ಸೇರಿದಂತೆ ನೀವು ನೀಡುವ ಮಾಹಿತಿ

ii). ನಿಮ್ಮ ವ್ಯವಹಾರದ ಯೋಜನೆ

iii). ಅಗತ್ಯವಾದಲ್ಲಿ ಲೆಕ್ಕ ಪತ್ರ ಪಟ್ಟಿಗಳ ಮೂಲಕ ನಿಮ್ಮ ವ್ಯವಹಾರದಲ್ಲಿನ ಹಣದ ಹರಿವು ಲಾಭ ಮತ್ತು ಹಾಲಿ ಇರುವ ಹಣಕಾಸಿನ ಬದ್ಧತೆಗಳ ವಿಷಯ.

iv). ನಿಮ್ಮ ಖಾಸಗಿ ಹಣಕಾಸಿನ ಬದ್ಧತೆಗಳು

v). ಪೂರ್ವದಲ್ಲಿ, ನೀವು ಹಣಕಾಸನ್ನು ಯಾವ ರೀತಿಯಲ್ಲಿ ನಿಭಾಯಿಸಿರುತ್ತೀರಾ.

vi). ಉದ್ದರಿ ಸಂಬಂಧಿತ ಏಜೆನ್ಸಿಗಳಿಂದ ನಾವು ಪಡೆಯುವ ಮಾಹಿತಿ.

vii). ಖ್ಯಾತ ಉದ್ದರಿ ಯೋಗ್ಯತೆ ನಿರ್ಧರಣೆ ಏಜೆನ್ಸಿಗಳಿಂದ ಯಾವುದೇ ರೇಟಿಂಗ್ ನೀಡಿದ್ದಲ್ಲಿ

viii). ಇತರೆ ಸಾಲ ನೀಡಿಕೆದಾರರ/ ಉದ್ದರಿದಾರರಂತಹವರಿಂದ ಮಾಹಿತಿ.

ix). ಮಾರುಕಟ್ಟೆಯ ವರದಿಗಳು

x). ಕಾರ್ಖಾನೆ ಮತ್ತು ಯಂತ್ರೋಪಕರಣಗಳನ್ನು ಅಥವಾ ಸ್ಥಿರ ಆಸ್ತಿಯನ್ನು ಭದ್ರತೆಗಾಗಿ ನೀಡಿದ್ದರೆ ಅವುಗಳ ಮೌಲ್ಯೀಕರಣ ವರದಿ ಮತ್ತು ಕಾನೂನು ಅವಗಾಹನೆ ವರದಿಯನ್ನು ನಾವು ಪಟ್ಟಿ ಮಾಡಿರುವ ಇಂಜಿನಿಯರ್/ ಅಡ್ವೋಕೇಟ್ ಮಂದಿಯಿಂದ ತರಬೇಕು.

xi. ಅನ್ವಯವಾಗುವಂತಹ ಸಂದರ್ಭಗಳಲ್ಲಿ ಸಿಜಿಟಿಎಂಎಸ್ಇ ಗ್ಯಾರಂಟಿಯಡಿ ಸಾಲವನ್ನು ಒಳಗೊಳಿಸಲು ಗ್ರಾಹಕರು ಒಪ್ಪುತ್ತಾರೆಯೇ ಎಂಬ ಅಂಶ.

xii) ಬೇರಾವುದೇ ಪ್ರಸ್ತುತವಾದ ಮಾಹಿತಿ

ಇ) ನಾವು

i) ಸಾಲಗಳು 10 ಲಕ್ಷ ರೂಪಾಯಿಯವರೆಗಿದ್ದರೆ ಅಥವಾ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಕಾಲಕಾಲಕ್ಕೆ ನಿಗದಿಪಡಿಸುವ ಮಿತಿಯವರೆಗಿದ್ದರೆ ನಿಗದಿಪಡಿಸುವ ಸಹಭದ್ರತೆಯನ್ನು ಅಂಗೀಕರಿಸುವುದಿಲ್ಲ.

ii) ಅನ್ವಯವಾಗುವಂತಿದ್ದಲ್ಲಿ ನಿಮ್ಮ *ವ್ಯವಹಾರದ ಸ್ಥಿತಿ* ನಮಗೆ ತೃಪ್ತಿಕರವಾಗಿ ಕಂಡುಬಂದರೆ ಮತ್ತು ಹಣಕಾಸಿನ ಸ್ಥಿತಿ ಸುಸ್ಥಿತಿಯಲ್ಲಿದ್ದರೆ ರೂ. 25 ಲಕ್ಷದವರೆಗೆ ಸಹಭದ್ರತೆ ರಹಿತವಾಗಿ ಒದಗಿಸುವುದನ್ನು ಪರಿಗಣಿಸಬಹುದು

iii) ಮುಕ್ತ ಸಾಲವನ್ನು ಅನ್ವಯವಾಗುವಂತಿದ್ದಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಾಗಿ ಇರುವ ಸಾಲ ಖಾತರಿ ನಿಧಿ ವಿಶ್ವಸ್ಥ ಮಂಡಳಿಯ ಸಾಲ ಖಾತರಿ ಯೋಜನೆಯಡಿ ಮಂಜೂರಾದ 100 ಲಕ್ಷಗಳ ಒಳಗಿನ ಸಾಲವನ್ನು ಒಳಗೊಳ್ಳುವ ಸವಲತ್ತುಗಳ ಅಳವಡಿಕೆಗೆ ನಿಮ್ಮ ಒಪ್ಪಿಗೆಯನ್ನು ಪಡೆದುಕೊಳ್ಳುತ್ತೇವೆ. ಮತ್ತು ಒಂದು ವೇಳೆ, ಸೌಲಭ್ಯವು ಅರ್ಹತೆಯನ್ನು ಪಡೆದಿದ್ದರೆ, (CGTSME) ಸಿಜಿಟಿಎಸ್ಎಂಇ ಸ್ಕೀಮ್‌ನಡಿ ಬರುವಂತಿದ್ದರೆ, ನೀವು ಒಪ್ಪಿರುವಂತೆಯೇ, ರೂ.100 ಲಕ್ಷದೊಳಗಿನ ಸಾಲಸೌಲಭ್ಯಕ್ಕೆ ಸಹಭದ್ರತೆಯನ್ನಾಗಲಿ/ಅಥವ ಮೂರನೆ ಪಕ್ಷದವರ ಭದ್ರತೆಯನ್ನಾಗಲಿ ಅಪೇಕ್ಷಿಸುವುದಿಲ್ಲ.

iv) ನಿಮ್ಮ ಅಪೇಕ್ಷಿತ ವಾರ್ಷಿಕ ವ್ಯವಹಾರದ ಮೇಲೆ ಲೆಕ್ಕಹಾಕಿ ಅದರ ಕನಿಷ್ಟ 20% ಕಿರು ಮತ್ತು ಸಣ್ಣ ಉದ್ಯಮ (ತಯಾರಿಕೆ) ದ ದುಡಿಯುವ ಬಂಡವಾಳವಾಗಿ ನಿಮಗೆ ಒದಗಿಸುತ್ತೇವೆ.

v) *ಉತ್ಪನ್ನವು ಅಪೇಕ್ಷಿತ ಮಟ್ಟವನ್ನು* ಮೀರಿದ ಸಂದರ್ಭಗಳಲ್ಲಿ ಅಥವಾ ಆರಂಭದಲ್ಲಿ *ಲೆಕ್ಕಹಾಕಿದ* ದುಡಿಯುವ ಬಂಡವಾಳವು *ಸಾಲದೇ ಆದಲ್ಲಿ* ಮತ್ತು ನೀವು ಅಗತ್ಯ ಸಾಕ್ಷ್ಯಾಧಾರಗಳನ್ನು ಒದಗಿಸಿದಲ್ಲಿ ದುಡಿಯುವ ಬಂಡವಾಳದಲ್ಲಿ ಸೂಕ್ತ ಹೆಚ್ಚಳಕ್ಕಾಗಿ ನಿಮ್ಮ ಮನವಿಯನ್ನು ಪರಿಗಣಿಸುತ್ತೇವೆ

ಈ. ಖಾತರಿಗಳು

ನಿಮ್ಮ ಬಾಧ್ಯತೆಗಳಿಗಾಗಿ ನೀವು ಬೇರೊಬ್ಬರಿಂದ ಖಾತರಿ ಅಥವಾ ಭದ್ರತೆಯನ್ನು ನಾವು ಸ್ವೀಕರಿಸುವುದನ್ನು ನೀವು ಅಪೇಕ್ಷಿಸಿದಲ್ಲಿ ನಾವು ಅವರಿಗೆ ಅಥವಾ ಅವರ ಕಾನೂನು ಸಲಹೆಗಾರರಿಗೆ ನಿಮ್ಮ ಹಣಕಾಸಿನ ವ್ಯವಹಾರದ ಬಗ್ಗೆ ಗೋಪ್ಯ ಮಾಹಿತಿಯನ್ನು ಕೊಡುವಬಗ್ಗೆ ನಿಮ್ಮ ಒಪ್ಪಿಗೆಯನ್ನು ನಾವು ಕೋರುತ್ತೇವೆ.

ಇದಲ್ಲದೆ

- **i)** ನಾವು ಅವರಿಗೆ, ಅವರ ಬಾಧ್ಯತೆಗಳು ಮತ್ತು ಅವರ ನಿರ್ಧಾರದ ಸಾಧುವಾದ ಪರಿಣಾಮಗಳನ್ನು ತಿಳಿದಿರುವುದನ್ನು ಖಚಿತಪಡಿಸಿಕೊಳ್ಳುವುದಕಾಗಿ ಸ್ವತಂತ್ರ ಕಾನೂನು ಸಲಹೆಗಳನ್ನು ಪಡೆಯಲು ಪ್ರೋತ್ಸಾಹಿಸುತ್ತೇವೆ(ಉಚಿತವಾದಲ್ಲಿ, ಅವರಲ್ಲಿ ರುಜುಹಾಕಲು ನಾವು ಕೇಳುವ ದಾಖಲೆಗಳಲ್ಲಿ ಈ ಸಲಹೆ ಸ್ಪಷ್ಟ ಮತ್ತು ಸುಲಭವಾಗಿ ಕಾಣುವಂತೆ ಇರುತ್ತದೆ).
- **ii)** ನೀವು ಅಥವಾ ನಿಮ್ಮ ಉದ್ಯಮವು ಪಡೆದಿರುವ ಉದ್ದರಿ ಸೌಲಭ್ಯಗಳಿಗೆ ಖಾತರಿ ಅಥವಾ ಇತರ ಭದ್ರತೆಗಳನ್ನು ನೀಡುವ ಮೂಲಕ ನಿಮ್ಮಂತೆಯೇ ಅವರೂ ಹೊಣೆಗಾರರಾಗಿರುತ್ತಾರೆ ಎಂದು ತಿಳಿಸುತ್ತೇವೆ.
- **iii)** ನಿಮಗೆ ಮಂಜೂರಾದ ಸಾಲ/ಸಾಲ ಕರಾರಿಗೆ ಸಹಿ ಹಾಕಿದ ಭದ್ರತೆದಾರರಿಗೆ ನಿಬಂಧನೆ ಮತ್ತು ಷರತ್ತುಗಳ ಪ್ರತಿಯನ್ನು ನೀಡುತ್ತೇವೆ
- **iv)** ನಿಮ್ಮ ಖಾತೆಯ ಕಾಲಾವಧಿ ಸಾಲ/ಬೇಡಿಕೆ ಸಾಲಗಳಿಗೆ ಭದ್ರತೆದಾರರಿಗೆ ಖಾತೆಯ ವಾರ್ಷಿಕ ವಹಿವಾಟಿನ ಪ್ರತಿಯೊಂದನ್ನು ಕಳಿಸುತ್ತೇವೆ.

5.3 ಮಂಜೂರಾತಿ / ನಿರಾಕರಣೆ

ನಾವು:

ಅ) ಪ್ರತಿಫಲ ಸಿದ್ಧಾಂತದಂತೆ ಉದ್ದರಿ ಸೌಲಭ್ಯದ ಮಂಜೂರಾತಿಗೆ ಯಾವುದೇ ಠೇವಣಿಯನ್ನು ಒತ್ತಾಯಿಸುವುದಿಲ್ಲ.

ಆ) ಓವರ್‌ಡ್ರಾಫ್ಟ್‌ನ್ನು ಒದಗಿಸುವಾಗ ಅಥವಾ ಅಸ್ತಿತ್ವದಲ್ಲಿರುವ ಮಿತಿಯಲ್ಲಿ ಹೆಚ್ಚಳವನ್ನು ಮಾಡುವಾಗ ಓವರ್‌ಡ್ರಾಫ್ಟ್‌ನ್ನು ನಾವು ಒತ್ತಾಯಿಸಿದಾಗ ಮರುಪಾವತಿ ಮಾಡಬೇಕಾಗಿರುವುದೋ ಇಲ್ಲವೋ ಎಂಬುದನ್ನು ತಿಳಿಸುತ್ತೇವೆ.

ಇ) ಒಪ್ಪಿದ ಉದ್ದರಿ ಸೌಲಭ್ಯಗಳನ್ನು ನಿರ್ವಹಿಸುವ ಷರತ್ತುಗಳು ಮತ್ತು ನಿಬಂಧನೆಗಳು ಮತ್ತು ಕೇವಿಯೆಟ್‌ಗಳನ್ನು ಬರೆದು ಪ್ರಮಾಣೀಕರಿಸಿ ಅದರ ಪ್ರತಿಯನ್ನು ನಿಮಗೆ ನೀಡುತ್ತೇವೆ.

ಈ) ನೀವು ನೀಡಿದ ಸಾಲದ ದಾಖಲೆಗಳ ಮತ್ತು ಅದಕ್ಕೆ ಲಗತ್ತಿಸಿದ ಎಲ್ಲ ಅಡಕಗಳ ಪ್ರತಿಯನ್ನು ಪಟ್ಟಿಯೊಂದಿಗೆ ನಮ್ಮ ವೆಚ್ಚದಲ್ಲಿ ಒದಗಿಸುತ್ತೇವೆ.

ಉ) ಸಾಲ ಅಥವಾ ಉದ್ದರಿಗಾಗಿ ನಿಮ್ಮಿಂದ ಬಂದ ಮನವಿಯನ್ನು ಪರಿಗಣಿಸದೇ ಇರುವುದಕ್ಕಾಗಿ ಕಾರಣಗಳನ್ನು ಬರವಣಿಗೆಯಲ್ಲಿ ತಿಳಿಸುತ್ತೇವೆ.

ಊ) ಮಾಪನ ಪದ್ಧತಿಯನ್ನು ಅನುಸರಿಸುತ್ತೇವೆ ಮತ್ತು ಅವುಗಳ ಮಾನದಂಡಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇವೆ.

ಋ) ಅವಧಿಪೂರ್ವ ಪಾವತಿ ದಂಡವನ್ನು ವಿಧಿಸದೆ ರೂ. 50 ಲಕ್ಷದವರೆಗಿನ ಸಾಲವನ್ನು ಅವಧಿಪೂರ್ವ ಪಾವತಿ ಮಾಡಲು ಅನುಮತಿಸುತ್ತೇವೆ.

ಎ) ಚರ ದರಗಳ ಸಾಲವನ್ನು ಅವಧಿಪೂರ್ವ ಪಾವತಿಗಾಗಿ ಯಾವುದೇ ರೀತಿಯ ದಂಡವನ್ನೂ ವಿಧಿಸುವುದಿಲ್ಲ.

ಏ) ಸಾಲ ಮಂಜೂರಾತಿಗಾಗಿ ಅನುಸರಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಅನುಪಾಲನೆ ಮಾಡಿದ ದಿನಾಂಕದಿಂದ ಎರಡು ಕೆಲಸದ ದಿನಗಳೊಳಗಾಗಿ ಸಾಲ ವಿತರಣೆಯಾಗುವಂತೆ ನೋಡಿಕೊಳ್ಳುತ್ತೇವೆ.

ಐ) ನೀವು ತೀರಿಸಬೇಕಾದ ಕಂತುಗಳ ಪಟ್ಟಿಯನ್ನು ನಿಮಗೆ ಒದಗಿಸುತ್ತೇವೆ (ಅಸಲು ಮತ್ತು ಕಾಲಾವಧಿ ಸಾಲಕ್ಕೆ ವಿಧಿಸಿರುವ ಬಡ್ಡಿಯನ್ನು ಒಳಗೊಂಡ ಮರುಪಾವತಿ ಪಟ್ಟಿ)

ಒ) ನಿಮಗೆ ನೀಡಿದ ಮಂಜೂರಾತಿ ಪತ್ರದಲ್ಲಿ ಸೂಚಿಸಿದ ಷರತ್ತು ಮತ್ತು ನಿಬಂಧನೆಗಳ ಅನುಸಾರ ಕಾಲಕಾಲಕ್ಕೆ ಸೌಲಭ್ಯದ ಪರಿಶೀಲನೆ ಮತ್ತು ನವೀಕರಣವನ್ನು ಮಾಡುವಂತೆ ನೋಡಿಕೊಳ್ಳುತ್ತೇವೆ.

5.4 ಕೇಂದ್ರೀಕೃತ ನೋಂದಣಿ

ಸ್ಥಿರಾಸ್ತಿಯನ್ನು ಪ್ರಮುಖ ಅಥವಾ ಸಹಭದ್ರತೆಯ ಮೂಲಕ ನೀವು ಸಾಲಸೌಲಭ್ಯ ಪಡೆದ ಮೇಲೆ ಕೇಂದ್ರೀಕೃತ ನೋಂದಣಿ ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂದು ಸೂಚಿಸುತ್ತೇವೆ. ಮತ್ತು ಯಾವುದೇ ಸಾಲಗಾರ ಮತ್ತು ಸ್ವತ್ತುಗಳೊಂದಿಗೆ ವ್ಯವಹರಿಸುವವರಿಗೆ ದಾಖಲೆಗಳ ಲಭ್ಯತೆಯ ಕುರಿತು ಮಾಹಿತಿ ನೀಡುತ್ತೇವೆ.

5.5 ಸಾಲ ವಿತರಣೆಯ ನಂತರ

ನಾವು–

ಅ) ಸಾಲ ನೀಡಿಕೆಯ ಶರತ್ತುಗಳು, ಸಾಲ ಒಡಂಬಡಿಕೆ ಅಥವಾ ಬ್ಯಾಂಕಿನ ಅರಿವಿಗೆ ಬರುವ ಹೊಸ ಮಾಹಿತಿಗಳನ್ನು ಹೊರತುಪಡಿಸಿ, ನಿಮ್ಮ ವ್ಯವಹಾರಗಳಲ್ಲಿ ನಾವು ಮಧ್ಯ ಪ್ರವೇಶಿಸುವುದಿಲ್ಲ.

ಆ) ನಮ್ಮ ಮೇಲ್ವಿಚಾರಣಾ ಪ್ರಕ್ರಿಯೆಯಲ್ಲಿ ಸಕಾರಾತ್ಮಕವಾಗಿರಲು ನಮ್ಮೊಡನೆ ವ್ಯವಹರಿಸುವಾಗ ನೀವು ಎದುರಿಸಬಹುದಾದ ನೈಜ ತೊಂದರೆಗಳನ್ನು ಸಹಾನುಭೂತಿಯಿಂದ ಕಾಣಲು ಪ್ರಯತ್ನಿಸುತ್ತೇವೆ.

ಇ) ಬೇರಾವುದೇ ಸಾಲ ನೀಡಿಕೆ ಸಂಸ್ಥೆಯಿಂದ ನೀವು ತರುವಾಯ ಸಾಲ ಪಡೆದಿರುವ ಮಾಹಿತಿಯನ್ನು ಒದಗಿಸಬೇಕಾಗುತ್ತದೆ

ಈ) ಕೆಳಕಂಡ ಮಾಹಿತಿಯನ್ನು ನಿಮ್ಮಿಂದ ನಿರಂತರವಾಗಿ ಪಡೆಯುತ್ತೇವೆ:

i) ಕಾಲ ಕಾಲಕ್ಕೆ ಸ್ಟಾಕ್ ಮತ್ತು ಇತರ ದಾಖಲೆಗಳು
ii) ನಿಮ್ಮ ವ್ಯವಹಾರ ಯೋಜನೆಯಲ್ಲಿ ಮಾಡಲಾದ ಅಂದಾಜು ಹಾಗೂ ವಾಸ್ತವಿಕ ಫಲಿತಾಂಶಗಳ ತುಲನೆ
iii) ವ್ಯವಹಾರ ಯೋಜನೆಯ ಮುಖ್ಯ ಅಂಶಗಳ ಪ್ರಗತಿ
iv) ಸಂತುಲಿತ ಪತ್ರ (ಬ್ಯಾಲೆನ್ಸ್ ಶೀಟ್) ಮತ್ತು ಲಾಭ–ನಷ್ಟಗಳ ತಖ್ತೆಯಂತಹ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಇತರ ಸಹಾಯಕ ದಾಖಲೆಗಳು
v) ಸಾಲ ಪಡೆದವರು ಮತ್ತು ಸಾಲ ನೀಡಿದವರ ವಯೋಮಾನ–ವಾರು ಪಟ್ಟಿ ಮತ್ತು ಒಳಗೊಂಡಿರುವ ಮೊತ್ತ

ಉ) ಸಾಮಾನ್ಯ ಸುರಕ್ಷತೆಗಳಿಗೆ ಅನುಗುಣವಾಗಿ ನಿಮ್ಮ ಮಿತಿಗಳಿಗೆ ಒಳಪಟ್ಟು ಹಿಂತೆಗೆತಗಳಿಗೆ ಅನುಮತಿ ನೀಡುತ್ತೇವೆ.

ಊ) ನಿಮ್ಮ ವ್ಯವಹಾರ ಸಂದರ್ಭಗಳು ಬದಲಾದಲ್ಲಿ ನಿಮ್ಮಿಂದ ನಮಗೆ ಬೇಕಾದ ಯಾವುದೇ ಹೊಸ ಮಾಹಿತಿಯ ಬಗ್ಗೆ ನಿಮ್ಮೊಡನೆ ಮಾತನಾಡುತ್ತೇವೆ.

ಋ) ಸಾಲಪಡೆದ ಖಾತೆಯ ವರ್ಗಾವಣೆಯ ವಿಷಯದಲ್ಲಿ ನಿಮ್ಮಿಂದಾಗಲಿ ಅಥವಾ ಖಾತೆಯನ್ನು ವಹಿಸಿಕೊಳ್ಳುವ ಸಂಭಾವ್ಯ ಬ್ಯಾಂಕ್ ಅಥವಾ ಆರ್ಥಿಕ ಸಂಸ್ಥೆಯಿಂದಾಗಲೀ ಕೋರಿಕೆ ಸ್ವೀಕಾರವಾದ ಎರಡು ವಾರಗಳೊಳಗೆ ನಮ್ಮ ಒಪ್ಪಿಗೆ ಅಥವಾ ಅನ್ಯಥಾ ತಿಳಿಸುತ್ತೇವೆ.

ಎ) ಸಾಲ ಮರುಪಾವತಿ ಮಾಡಿದ ಕೂಡಲೇ ಮತ್ತು ತೀರಿಸಬೇಕಾದ ಎಲ್ಲ ಬಾಕಿಗಳನ್ನು ತೀರಿಸಿದ 15 ದಿನಗಳ ಒಳಗೆ ಎಲ್ಲ ಭದ್ರತೆಗಳನ್ನು ಬಿಡುಗಡೆ ಮಾಡುತ್ತೇವೆ. ಒಂದೊಮ್ಮೆ, ಇತ್ಯರ್ಥಗೊಳಿಸಬೇಕಾದ ಯಾವುದಾದರೂ ಹಣ ಬೇಡಿಕೆ ಇದ್ದಲ್ಲಿ ನಿಮಗೆ ಆ ಕುರಿತು ಸಂಪೂರ್ಣ ವಿವರ ನೀಡುವ ಮುಂಗಡ ನೋಟಿಸನ್ನು ನೀಡುತ್ತೇವೆ. ಬಳಿಕ, ಎಲ್ಲ ಬಗೆಯ ಬೇಡಿಕೆಗಳು ಮರುಪಾವತಿಸಿದ ನಂತರ ದಾಖಲೆಪತ್ರ, ಭದ್ರತಾಪತ್ರ, ಅಡಮಾನವಿಟ್ಟ ಆಸ್ತಿಹಕ್ಕುಪತ್ರಗಳನ್ನು ಬಿಡುಗಡೆ ಮಾಡುತ್ತೇವೆ.

ಏ) ಕಾಲಕಾಲಕ್ಕೆ ನಿಮ್ಮ ಖಾತೆಯ ವಿವರಗಳ ಮಾಹಿತಿಯನ್ನು ನೀಡುವುದರ ಜತೆಗೆ, ಸಾವಧಿ ಸಾಲ/ಬೇಡಿಕೆ ಸಾಲಗಳ ವಾರ್ಷಿಕ ಸ್ಟೇಟ್‌ಮೆಂಟ್ ಕೂಡ ಒದಗಿಸುತ್ತೇವೆ.

ಐ) ಭದ್ರತಾ ಪತ್ರವನ್ನು ದಾಖಲಿಸಿದ 24ಗಂಟೆಗಳೊಳಗೆ ಕೊಡಮಾಡಲಾಗಿರುವ ಮಿತಿಗೆ ಒಳಪಟ್ಟು ಧನಾದೇಶಾಧಿಕಾರದ ಹೆಚ್ಚಳವನ್ನು ನೀಡುತ್ತೇವೆ.

ಒ) ನಿಮ್ಮ ನಿರ್ವಹಣಾ ಖಾತೆಯ ಚಟುವಟಿಕೆಗಳ ಕಾಲಿಕ ಪಟ್ಟಿಯನ್ನು ನೀಡುವುದರ ಜೊತೆಗೆ, ನಿಮ್ಮ ಸಾಲ/ ಬೇಡಿಕೆಯ ಸಾಲದ ಕುರಿತು ವಾರ್ಷಿಕ ಚಟುವಟಿಕೆಯ ಪಟ್ಟಿಯನ್ನು ನೀಡುತ್ತೇವೆ

ಓ) ನಿಮಗೆ ಅಗತ್ಯವಿದ್ದಲ್ಲಿ ನಿಮ್ಮ ಸಾಲದ ವಿವರಗಳ ಮಾಹಿತಿಯನ್ನು ದರ ಪಟ್ಟಿಯಲ್ಲಿ ನಿಗದಿಪಡಿಸಿದ ದರಕ್ಕನುಗುಣವಾಗಿ ನಿಮಗೆ ಮತ್ತೆ ನೀಡುತ್ತೇವೆ.

ಔ) ನೀವು ಸಾಧಿಸಿರುವ ಪ್ರಗತಿಯನ್ನು ಕೆಳಗೆ ಸೂಚಿಸಿರುವ ಯಾವುದೇ ಒಂದು ಅಥವಾ ಅದಕ್ಕಿಂತಲೂ ಹೆಚ್ಚಿನ ವಿಭಾಗಗಳಿಂದ ನಿಗಾ ಇಟ್ಟುಕೊಳ್ಳುತ್ತೇವೆ.

i) ನೀವು ಹೊಂದಿರುವ ಸ್ಟಾಕುಗಳ ಕಾಲಕಾಲದ ವಿವರಣಾ ಪತ್ರಗಳ ತಪಾಸಣೆ

ii) ನಮ್ಮಲ್ಲಿರುವ ನಿಮ್ಮ ಖಾತೆಯ ವಹಿವಾಟುಗಳನ್ನು ಗಮನಿಸುವ ಮೂಲಕ

iii) ಸ್ಟಾಕ್‌ಗಳು ಮತ್ತು/ ಅಥವಾ ನಾವು ಮಾತ್ರ ಒದಗಿಸುವ ಆಸ್ತಿ ಪರಿಕರಗಳ ತಪಾಸಣೆಗಾಗಿ ನಮ್ಮ ನೌಕರರು ಅಥವಾ ಬೇರೆ ಅಧಿಕೃತ ಪ್ರತಿನಿಧಿಗಳನ್ನು ಭೇಟಿಗಾಗಿ ಕಳಿಸುವ ಮೂಲಕ

iv) ನಿಮ್ಮ ವಹಿವಾಟು ಹೇಗೆ ನಡೆಯುತ್ತಿದೆಯೆಂದು ತಿಳಿಯಲು ಅಗತ್ಯವಿದ್ದಾಗ ಮಾರುಕಟ್ಟೆ ವರದಿಗಳನ್ನು ಪಡೆದುಕೊಳ್ಳುವ ಮೂಲಕ

ಅಂ) ನಿಮ್ಮ ಖಾತೆಯು ಸತತವಾಗಿ ಅನಿಯಮಿತವಾಗಿದ್ದರೆ ಅಥವಾ ಎನ್.ಪಿ.ಎ (NPA) ಆಗುವ ಸೂಚನೆಯನ್ನಿತ್ತರೆ ನಿಮ್ಮ ಖಾತೆ ಸಂಬಂಧಿ ಮಾಹಿತಿಯೂ ಸೇರಿದಂತೆ ನಿಮಗೆ ವ್ಯವಹಾರಕ್ಕೆ ಸಂಬಂಧಿಸಿದ ಅಲ್ಲದೆ ಇತರ ಸಂಬಂಧೀ ಸೂಕ್ಷ್ಮ ಪ್ರಮಾಣಗಳನ್ನು ಪತ್ರ/ಮೇಲ್ ಅಥವಾ ಎಸ್.ಎಂ.ಎಸ್ ಮುಖಾಂತರ ತಿಳಿಸಲು ಯತ್ನಿಸಲಾಗುವುದು.

ಅಃ) ಒಂದೊಮ್ಮೆ ಕರೆಕಳಿಸುವ/ ಪಾವತಿ ಹೆಚ್ಚಿಸುವ ಅಥವಾ ಒಪ್ಪಂದದಲ್ಲಿನ ಕ್ಷಮತೆ ಅಥವಾ ಹೆಚ್ಚುವರಿ ಮಾಹಿತಿ ಬೇಕು ಎಂದಾದಲ್ಲಿ ಮುಂಗಡವಾಗಿ ಕಳಿಸುತ್ತೇವೆ.

5.6 ನಿಧಿಯೇತರ ಸೌಲಭ್ಯಗಳು

ಅ) ಲೆಟರ್ ಆಫ್ ಕ್ರೆಡಿಟ್‌ಗಳ ನೀಡಿಕೆ ಅಥವಾ ಗ್ಯಾರಂಟಿ ನೀಡುವ ಮೂಲಕ ಆದೇಶ ಸ್ಥಿರೀಕರಣ, ಹಸ್ತಾಂತರ, ಸೋಡಿ ಇತ್ಯಾದಿಗಳ ಮೂಲಕ ಬಂಡವಾಳ ಸಲಕರಣೆ ಅಥವಾ ಮೂಲ ವಸ್ತುಗಳ ಉಪಭೋಗ್ಯವಸ್ತುಗಳ ಖರೀದಿಗೆ ನಿಧಿಯೇತರ ಸೌಲಭ್ಯಗಳನ್ನು ನಾವು ನೀಡಬಹುದು. ಲೆಟರ್ ಆಫ್ ಕ್ರೆಡಿಟ್, ಭದ್ರತೆ, ಸಂಗ್ರಹಣೆಗಳು ಅಗತ್ಯ ರಾಷ್ಟ್ರೀಯ ಕಾನೂನುಗಳಿಗೆ ಮಾತ್ರ ಬಾಧ್ಯವಾಗಿರದೆ, ಅಂತಾರಾಷ್ಟ್ರೀಯ ಚೇಂಬರ್ ಆಫ್ ಕಾಮರ್ಸ್ (ICC) ಆಗಿಂದಾಗ್ಗೆ ಹೊರತರುವ ಪ್ರಕಟಣೆಗೂ ಬದ್ಧವಾಗಿವೆ. ಮತ್ತು ನೀವು ಕೂಡ ಅದಕ್ಕೆ ಬಾಧ್ಯರಾಗಿರುತ್ತೀರಿ.

5.7 ವಿಮೆ

ನಾವು–

ಎ) ಯಾವುದೇ ವಿಮಾ ಸಂಸ್ಥೆಯ ಏಜೆಂಟರಾಗಿ ವಿಮೆಯ ಕುರಿತು ಯಾವುದೇ ಬಗೆಯ ಸೇವೆಯನ್ನು ನೀಡುವಿಕೆಯ ಕುರಿತು ಮಾಹಿತಿಯನ್ನು ನೀಡುತ್ತೇವೆ

ಬಿ) ಈ ವಿಮಾ ಸೇವೆಗಳ ಕುರಿತು ನಿಮ್ಮ ಲಿಖಿತ ಒಪ್ಪಿಗೆ ಇರುವುದನ್ನು ಖಾತರಿಪಡಿಸುತ್ತೇವೆ

ಸಿ) ಒಂದೊಮ್ಮೆ, ನಮ್ಮ ಬಳಿ ನೀವು ತೆಗೆದುಕೊಂಡ ಸಾಲಕ್ಕಾಗಿ ಯಾವುದೇ ಬಗೆಯ ಭದ್ರತೆಯನ್ನು ಇಟ್ಟಿದ್ದಲ್ಲಿ ಯಾವುದೇ ನಿರ್ದಿಷ್ಟ ವಿಮಾ ಸಂಸ್ಥೆಯಿಂದ ವಿಮೆ ಇಳಿಸುವಂತೆ ಒತ್ತಡ ಹೇರುವುದಿಲ್ಲ

5.8 ಆರ್ಥಿಕ ತೊಂದರೆಗಳು

ನಾವು ಹೇಗೆ ಸಹಾಯ ಮಾಡಬಹುದು?

5.8.1. ಆರ್ಥಿಕ ತೊಂದರೆಗಳ ಪ್ರಕರಣಗಳನ್ನು ನಾವು ಸಹಾನುಭೂತಿಯಿಂದ ಮತ್ತು ಸಕಾರಾತ್ಮಕ ದೃಷ್ಟಿಯಿಂದ ಪರಿಶೀಲಿಸುತ್ತೇವೆ. ನೀವು ಸಮಸ್ಯೆಗಳನ್ನು ಮೊದಲು ಗುರುತಿಸಿ ಆ ಬಗ್ಗೆ ಆದಷ್ಟು ಬೇಗ ನಮಗೆ ತಿಳಿಸಿ. ನಮಗೆ ಸಮಸ್ಯೆಗಳು ಗೊತ್ತಾದಲ್ಲಿ ಅವನ್ನು ಲಿಖಿತರೂಪದಲ್ಲಿ ನಿಮಗೆ ತಿಳಿಸುತ್ತೇವೆ. ಶೀಘ್ರ ಪರಿಹಾರವು ಪ್ರಸ್ತುತವೆನಿಸಿದರೆ ದೂರವಾಣಿ, ಫ್ಯಾಕ್ಸ್ ಅಥವಾ ಈ–ಮೇಲ್ ಮೂಲಕ ನಾವು ನಿಮ್ಮನ್ನು ಸಂಪರ್ಕಿಸಬಹುದು.

5.8.2 ನೀವು ಮಾಹಿತಿ ನೀಡದಿದ್ದಲ್ಲಿ ನಮಗೆ ಯಾವುದರ ಬಗ್ಗೆ ಅತಂಕವಿರುತ್ತದೆಂಬುದಕ್ಕೆ ಈ ಕೆಳಗಿನವು ಕೆಲವು ಉದಾಹರಣೆಗಳು.

ಅ) ವಾಣಿಜ್ಯ ಉತ್ಪನ್ನದ ಆರಂಭದಲ್ಲಿ ವಿಳಂಬ ಅಥವಾ ವೆಚ್ಚದಲ್ಲಿ ಹೆಚ್ಚಳ ಮುಂತಾದವುಗಳು

ಆ) ಸ್ಟಾಕ್ ಸರ್ಟಿಫಿಕೇಟು, ನವೀಕರಣ ಮಾಹಿತಿ ಅಥವಾ ಆಡಿಟ್ ಮಾಡಿದ ಹಣಕಾಸು ವಿವರಣಾ ಪಟ್ಟಿ ಸರಿಯಾದ ಸಮಯಕ್ಕೆ ಸಲ್ಲಿಸದೆ ಅತಿ ವಿಳಂಬ ಮಾಡುವುದು

ಇ) ನಿಮ್ಮ ನಗದು ಕಡ/ಚಾಲತಿ ಖಾತೆಗೆ ಬರುವ ಚೆಕ್‌ಗಳು ಹಣದ ಸೌಲಭ್ಯವಿಲ್ಲದೆ ಮರಳುವುದು

ಈ) ನಿಮ್ಮ ಒಪ್ಪಿದ ಮಂಜೂರಾತಿ ಮಿತಿಯನ್ನು ಆಗಾಗ ಮೀರಿದಲ್ಲಿ

ಉ) ನಿಮ್ಮಿಂದ ಸರಿಯಾದ ಸ್ಪಷ್ಟೀಕರಣ ಬರದೆ ನಿಮ್ಮ ವ್ಯವಹಾರದಲ್ಲಿ ಭಾರಿ ಏರಿಳಿತ ಕಂಡುಬಂದಲ್ಲಿ

ಊ) ಸಕಾರಣವಿಲ್ಲದೆ ಕೆಲಸ/ಉತ್ಪಾದನೆಯು ವಿಳಂಬವಾದಲ್ಲಿ/ ಸ್ಥಗಿತವಾದಲ್ಲಿ

ಋ) ವ್ಯವಹಾರದಲ್ಲಿ ನಷ್ಟವನ್ನು ಅನುಭವಿಸುತ್ತಿದ್ದರೆ

ೠ) ಆಕಸ್ಮಿಕವಾಗಿ ಪಾಲುದಾರ ಅಥವಾ ಸಹ ಪ್ರವರ್ತಕ ಅಥವಾ ಅತಿ ಮುಖ್ಯ ಗ್ರಾಹಕರನ್ನು ಅಥವಾ ಸಿಬ್ಬಂದಿಯನ್ನು ಕಳೆದುಕೊಂಡಲ್ಲಿ

ಎ) ನಿಮ್ಮ ಮೂಲಭೂತ ಚಟುವಟಿಕೆ ಬದಲಾಯಿಸಿದಲ್ಲಿ ಅಥವಾ ನಿಮ್ಮ ವ್ಯವಹಾರದ ಬಹುಭಾಗವನ್ನು ವಿಕ್ರಯಿಸಿದರೆ

ಏ) ನೀವು ಒಪ್ಪಿದ ಉದ್ದೇಶಗಳನ್ನು ಹೊರತುಪಡಿಸಿ ಇತರೇ ಉದ್ದೇಶಗಳಿಗೆ ಸಾಲ ಸೌಲಭ್ಯಗಳನ್ನು ಬಳಕೆಮಾಡಿಕೊಂಡರೆ ಅಥವಾ ಉದ್ದೇಶಿತ ವ್ಯವಹಾರಗಳಿಗೆ ಹೊರತಾಗಿ ನಿಧಿಯ ಮಾರ್ಗ ಬದಲಾವಣೆಮಾಡಿದಲ್ಲಿ

ಐ) ನಿಗದಿತ ಅವಧಿಯಲ್ಲಿ ಬಡ್ಡಿಯನ್ನು ಪಾವತಿಸದೇ ಇದ್ದಲ್ಲಿ

ಒ) ನಿಗದಿತ ಸಾಲ ಮರುಪಾವತಿ ವೇಳಾ ಪಟ್ಟಿಯನ್ನು ಅನುಸರಿಸದಿದ್ದಲ್ಲಿ

ಓ) ಆಗಾಗ, ನೀವು ನಿಮ್ಮ ಗ್ರಾಹಕರ ಮೇಲೆ ಬರೆದ ಬಿಲ್ಲುಗಳು ಪಾವತಿಯಾಗದೇ ವಾಪಸ್ಸಾದಲ್ಲಿ

ಔ) ನಿಮ್ಮ ಸರಬರಾಜುದಾರರು ನಿಮಗೆ ನೀಡಿದ ಬಿಲ್ಲುಗಳನ್ನು ಪಾವತಿಸದೇ ಆಗಾಗ ವಾಪಸ್ಸುಮಾಡಿದರೆ

ಅಂ) ನಾವು ನೀಡಿರುವ ಗ್ಯಾರಂಟಿಗಳನ್ನು ಪದೇ ಪದೇ ಬಳಸಿದಲ್ಲಿ

ಅಃ) ನಿಮ್ಮ ಖಾತೆಯಲ್ಲಿನ ವ್ಯವಹಾರಕ್ಕೆ ಅನುಗುಣವಾಗಿರದೆ ನಿಮ್ಮ ಸಾಲಗಳಲ್ಲಿ/ ಸಾಲ ಪಡೆದವರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದಲ್ಲಿ

ಕ) ನಿಮ್ಮ ಎಲ್ಲ ಮಾರಾಟ ಲಭ್ಯ ಹಣವನ್ನು ನಿಮ್ಮ ಖಾತಾ ಮುಖಾಂತರ ಮಾಡದಿದ್ದಲ್ಲಿ

ಖ) ನಿಮ್ಮ ಸಾಲ ಒಪ್ಪಂದಗಳಲ್ಲಿ ನಮೂದಿಸಿದ ಷರತ್ತುಗಳನ್ನು ಪಾಲಿಸದಿದ್ದಲ್ಲಿ

ಗ) ಕಾಲಮಿತಿಯೊಳಗೆ ನೀಡಬೇಕಾದ ಮಾಹಿತಿಯನ್ನು ನಮಗೆ ಒದಗಿಸದೇ ಇದ್ದಲ್ಲಿ

ಘ) ಸಾಲ ನೀಡಿದ ಇನ್ನೊಬ್ಬ ವ್ಯಕ್ತಿಯು ನಿಮ್ಮ ವ್ಯವಹಾರದ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಲ್ಲಿ ಅಥವಾ ಮುಚ್ಚುವ ಬಗ್ಗೆ ಅರ್ಜಿಯನ್ನು ತಂದಲ್ಲಿ

5.8.3 ನಿಮ್ಮ ತೊಂದರೆಗಳನ್ನು ಪರಿಹರಿಸುವಲ್ಲಿ ನಾವು ನಮಗೆ ಸಂಪೂರ್ಣ ಸಹಾಯ ನೀಡುತ್ತೇವೆ. ನಿಮ್ಮ ಸಕ್ರಿಯ ಸಹಕಾರದೊಂದಿಗೆ, ನಿಮ್ಮ ಹಣಕಾಸಿನ ತೊಂದರೆಗಳನ್ನು ನೀಗಲು ನಾವು ಯೋಜನೆಯೊಂದನ್ನು ಸಿದ್ಧಪಡಿಸುತ್ತೇವೆ ಮತ್ತು ನಮ್ಮ ಒಪ್ಪಂದಗಳ ಬಗ್ಗೆ ನಿಮಗೆ ಲಿಖಿತವಾಗಿ ತಿಳಿಸುತ್ತೇವೆ.

5.8.4 ನಿಮ್ಮ ಹಣಕಾಸಿನ ಸಮಸ್ಯೆಗಳನ್ನು ನಿಮಗೆ ನಿರ್ವಹಿಸಲು ಸಹಾಯಕವಾಗಲು ಸಾಲ ಸಲಹಾ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ನಾವು ಪ್ರಯತ್ನಿಸುತ್ತೇವೆ.

5.8.5 ಎ) ನೀವು ಕಷ್ಟದಲ್ಲಿದ್ದಾಗ, ನೀವು ಕೋರಿದಲ್ಲಿ ನಾವು ನಿಮ್ಮ ಸಲಹೆಗಾರರೊಂದಿಗೆ ಕಾರ್ಯನಿರತರಾಗುತ್ತೇವೆ. ನಿಮ್ಮ ವಿಶ್ವಾಸದ ವರ್ತನೆ, ಬೆಳವಣಿಗೆಗಳ ಬಗ್ಗೆ ನಮಗೆ ಆಗಾಗ ಮಾಹಿತಿ ನೀಡುವಿಕೆ, ನಮ್ಮೊಂದಿಗಿನ ನಿಮ್ಮ ಒಪ್ಪಂದದ ಪಾಲಿಸುವಿಕೆ, ಮತ್ತು ಸೂಕ್ತ ಬದಲಾವಣೆ ಮಾಡುವ ತ್ವರಿತ ಸಿದ್ಧತೆಗಳು ಸಹ ಮುಖ್ಯವಾಗಿವೆ.
ಬಿ) ನಿಮ್ಮ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ನಾವು ಒಟ್ಟಿಗೆ ಕಾರ್ಯನಿರತರಾಗಲು ನಿಮ್ಮನ್ನು ನಾವು ಹೆಚ್ಚಿನ ಹಣಕಾಸಿನ ಮಾಹಿತಿ/ಬದ್ಧತೆಗಳ ಬಗ್ಗೆ ನಿಮ್ಮನ್ನು ನಾವು ಸಂಪರ್ಕಿಸಬಹುದು.

5.9 ರೋಗಗ್ರಸ್ತ ಘಟಕಗಳ (ಎಂ.ಎಸ್.ಇಗಳ) ಪುನಶ್ಚೇತನ ಮತ್ತು ಋಣ ಪುನರ್ರಚನೆ

5.9.1 ನಿಮ್ಮ ಯಾವುದಾದರೂ ಸಾಲ ಖಾತೆಯು ಮೂರು ತಿಂಗಳವರೆಗೆ ಅನುತ್ಪಾದಕ ಆಸ್ತಿಯಾಗಿದ್ದಲ್ಲಿ ಅಥವಾ ಹಿಂದಿನ ಲೆಕ್ಕ ವರ್ಷದಲ್ಲಿ ಆಕರಿಸಿದ ನಷ್ಟದಿಂದ ನಿವ್ವಳ ಆಸ್ತಿಯಲ್ಲಿ ಶೇಕಡ 50ರಷ್ಟು ಕೊರೆತ ಉಂಟಾದಲ್ಲಿ ಅಂತಹ ಸಾಲ ಖಾತೆಗೆ ಪುನಶ್ಚೇತನಗೊಳಿಸಲು ಮರು ಸಾಲ ನೀಡಿಕೆ ಅಥವಾ ಸಾಲ ಸ್ವರೂಪದ ಮರು ರಚನಾ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

5.9.2 ರೋಗಗ್ರಸ್ತ ಎಂ.ಎಸ್.ಇಗಳ ಪುನಶ್ಚೇತನ ಮತ್ತು ಋಣ ಪುನರ್ರಚನೆಯ ನಿಮ್ಮ ಮನವಿಯನ್ನು ನಾವು ಪರಿಗಣಿಸುವಾಗ ಈ ಕೆಳಗಿನ ಕೆಲವು ಅಂಶಗಳನ್ನು ಗಮನಿಸುತ್ತೇವೆ:
ಅ) ನಿಮ್ಮ ಘಟಕ/ ಯೋಜನೆಯು ಸಮರ್ಥವಾಗಿದೆಯೇ /ಸಾಮರ್ಥ್ಯ ಹೊಂದಿದಿಯೇ ಎಂಬುದನ್ನು ಪರಿಶೀಲಿಸಿ ಘಟಕವು ರೋಗಗ್ರಸ್ತವಾಗಬಹುದಾದ ಮೂರು ತಿಂಗಳ ಅವಧಿಯೊಳಗೆ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ.
ಆ) ನಿಮ್ಮ ಘಟಕವು ಸಮರ್ಥವಾಗಿದೆಯೆಂದು/ ಅದರ ಸಾಮರ್ಥ್ಯ ಹೊಂದಿದೆಯೆಂದು ನಮಗೆ ಕಂಡು ಬಂದಲ್ಲಿ ಅದರ ಪುನಶ್ಚೇತನಕ್ಕಾಗಿ ಪರಿಷ್ಕರಣೆಯ ಕ್ರಿಯೆಯನ್ನು ಸಕಾಲದಲ್ಲಿ ಆರಂಭಿಸುತ್ತೇವೆ.
ಇ) ನಿಮ್ಮ ಘಟಕವು ಸಮರ್ಥವಾಗಿದ್ದು ಮತ್ತು ಸಮೂಹ/ ವಿವಿಧ ಬ್ಯಾಂಕುಗಳ ವ್ಯವಸ್ಥೆಯ ಅಡಿಯಲ್ಲಿದರೆ ಮತ್ತು ನಾವು ಹೆಚ್ಚು ಬಾಕಿ ಅಂಶವನ್ನು ಹೊಂದಿದ್ದರೆ ಪುನಶ್ಚೇತನ ಪ್ಯಾಕೇಜನ್ನು ರಚಿಸುವೆವು.
ಈ) ಭಾರತೀಯ ರಿಸರ್ವ್ ಬ್ಯಾಂಕಿನ ಷರತ್ತುಗಳ ಅನ್ವಯ ನಿಮ್ಮ ಕೊಡುಗೆಯೂ ಸೇರಿದಂತೆ ಪುನಶ್ಚೇತನ ಪ್ಯಾಕೇಜನ್ನು ರೂಪಿಸಬೇಕು ಮತ್ತು ನಿಮ್ಮ ಕೋರಿಕೆಯ ದಿನಾಂಕದಿಂದ ಗರಿಷ್ಟ 60 ದಿನಗಳ ಒಳಗಾಗಿ ಇದನ್ನು ಅನುಷ್ಠಾನ ಮಾಡಬೇಕು.
ಉ) ನಿಮ್ಮ ಘಟಕವು ಸಮರ್ಥವಲ್ಲವೆಂದು ಘೋಷಿಸಲ್ಪಟ್ಟರೆ, ಆಗ ನಮ್ಮ ಮೇಲಿನ ಪ್ರಾಧಿಕಾರದ ಮುಂದೆ ನಿಮ್ಮ ಮನವಿಯನ್ನು ಮತ್ತೊಮ್ಮೆ ಸಲ್ಲಿಸುವ ಅವಕಾಶ ಮಾಡಿಕೊಡುತ್ತೇವೆ.

5.9.3. ಪುನಶ್ಚೇತನ ಯೋಜನೆಯು ಯಶಸ್ವಿಯಾಗುವುದಿಲ್ಲವೆಂದು ನಾವು ಭಾವಿಸಿದರೆ, ಅದಕ್ಕೆ ಏನು ಕಾರಣವೆಂಬುದನ್ನು ನಾವು ವಿವರಿಸುತ್ತೇವೆ ಮತ್ತು ನಿಮಗೆ ಮತ್ತು ನಿಮ್ಮ ಸಲಹೆಗಾರರಿಗೆ ಇತರ ಆಯ್ಕೆಗಳನ್ನು ಪರಿಗಣಿಸಲು ಸಹಾಯ ಮಾಡುತ್ತೇವೆ.

5.9.4. ನಾವು ಒಂದು ಒಪ್ಪಂದಕ್ಕೆ ಬರಲಾಗದಿದ್ದರೆ, ನಿಮಗೆ ಬೆಂಬಲ ಮುಂದುವರೆಸಲು ನಮಗೇಕೆ ಸಾಧ್ಯವಿಲ್ಲವೆಂದೆನಿಸುತ್ತಿದೆಯೆಂಬುದನ್ನು ಮತ್ತು ನಮ್ಮ ಬೆಂಬಲವನ್ನು ಯಾವಾಗ ಹಿಂದಕ್ಕೆ ತೆಗೆದುಕೊಳ್ಳುತ್ತೇವೆ ಎಂಬುದನ್ನು ಸ್ಪಷ್ಟಪಡಿಸುತ್ತೇವೆ.

5.10 ಏಕ ಕಾಲಿಕ ಬಾಕಿ ಇತ್ಯರ್ಥ

ಅ) ಒಂದು ವೇಳೆ ಬ್ಯಾಂಕ್ ‘‘ಏಕಕಾಲಿಕ ಬಾಕಿ ಇತ್ಯರ್ಥ’’ (ಓಟಿಎಸ್) ಯೋಜನೆಯನ್ನು ಹೊರ ತಂದರೆ, ಅದನ್ನು ಬ್ಯಾಂಕಿನ ವೆಬ್ ತಾಣದಲ್ಲಿ ಪ್ರಕಟಿಸಿ ಮತ್ತು ಇತರ ವಿಧಾನಗಳ ಮೂಲಕ ಅದಕ್ಕೆ ವ್ಯಾಪಕ ಪ್ರಚಾರವನ್ನು ನೀಡುತ್ತೇವೆ.
ಆ) ಒಂದು ವೇಳೆ ನಿಮಗೆ ನಾವು ಬಾಕಿ ಚುಕ್ತ ಮಾಡಲು ಏಕ ಕಾಲಿಕ ಬಾಕಿ ಇತ್ಯರ್ಥ ಯೋಜನೆಯ ಅವಕಾಶ ನೀಡಿದರೆ, ಆಗ ನಮ್ಮ ಕೊಡುಗೆಯ ವಿವರಗಳನ್ನು ನಿಮಗೆ ವಿವರಿಸುತ್ತೇವೆ.
ಇ) ನಿಮಗೆ ನೀಡಲಾಗುವ ಏಕ ಕಾಲಿಕ ಬಾಕಿ ಇತ್ಯರ್ಥ ಯೋಜನೆಯ ಷರತ್ತು ಮತ್ತು ನಿಬಂದನೆಗಳನ್ನು ಲಿಖಿತರೂಪದಲ್ಲಿ ನಾವು ತಿಳಿಸುತ್ತೇವೆ.
ಈ) ಈ ಯೋಜನೆಯ ಲಾಭವನ್ನು ನಿಮಗೆ ಪಡೆದುಕೊಳ್ಳಲು ಅನುವಾಗುವಂತೆ ಅರ್ಜಿಯನ್ನು ನೀಡಲು ಮತ್ತು ಬಾಕಿ ಹಣವನ್ನು ಪಾವತಿ ಮಾಡಲು ನಿಮಗೆ ಸೂಕ್ತ ಸಮಯವನ್ನು ನೀಡುತ್ತೇವೆ.

ಎ) ಒಂದು ವೇಳೆ ನಿಮ್ಮ ಬಾಕಿ ಓಟಿಎಸ್ ಅಡಿಯಲ್ಲಿ ಚುಕ್ತಗೊಂಡರೆ ಸಾಲ ಮಾಹಿತಿ ಸಂಸ್ಥೆ(ಸಿಐಸಿ)ಯಲ್ಲಿ ನಿರ್ವಹಿಸುವ ನಿಮ್ಮ ಸಾಲದ ವಿವರಗಳ ಮೇಲಾಗುವ ಪರಿಣಾಮವನ್ನು ವಿವರಿಸಿ ಹೇಳುತ್ತೇವೆ.

5. 11 ಸಾಲ ಮತ್ತು ಬಾಕಿಯನ್ನು ಭದ್ರತೆಗೊಳಪಡಿಸುವುದು

ಅ) ನಿಮ್ಮ ಸಾಲವನ್ನು ನಾವು ಮಾರಿದರೆ, ನಾವು ಮಾರುವ ವ್ಯಕ್ತಿ ಅಥವಾ ಸಂಸ್ಥೆಯ ಹೆಸರು ಮತ್ತು ವಿಳಾಸವನ್ನು ಜೊತೆಗೆ ನಿಮ್ಮಿಂದ ವರ್ಗಾವಣೆಗೊಂಡ ಸಾಲ/ ಬಾಕಿಯ ಮೊತ್ತದ ವಿವರದೊಂದಿಗೆ ನಿಮಗೆ ತಿಳಿಸುತ್ತೇವೆ. ಸಾಮಾನ್ಯ ಪದ್ಧತಿಯಂತೆ ಸಾಲಗಳು/ ಬಾಕಿಗಳು ಸ್ಟಾಂಡರ್ಡ್ ಅಲ್ಲದಿದ್ದಲ್ಲಿ ಅದನ್ನು ಆಸ್ತಿ ಪುನರ್ರಚನಾ ಸಂಸ್ಥೆ (ಎ.ಆರ್.ಸಿ) ಯ ಮೂಲಕ ಮಾರಾಟಕ್ಕೆ ಪರಿಗಣಿಸಲಾಗುತ್ತವೆ.

ಆ) ಅಂತಹ ಸಂದರ್ಭದಲ್ಲಿ ಯಾವ ವ್ಯಕ್ತಿ/ ಸಂಸ್ಥೆಗೆ ನಿಮ್ಮ ಸಾಲ/ಬಾಕಿಯನ್ನು ವರ್ಗಾಯಿಸಲಾಗಿರುತ್ತದೋ ಅದಕ್ಕೆ ನೀವು ಬಾಕಿಯಿರುತ್ತೀರಿ ಮತ್ತು ಇಡೀ ಮೊತ್ತವನ್ನು ಅವರಿಗೆ ಪಾವತಿಸಲು ನೀವು ಬಾಧ್ಯರಾಗಿರುತ್ತೀರಿ.

ಇ) ಯಾವ ವ್ಯಕ್ತಿ/ಸಂಸ್ಥೆಗೆ ನಿಮ್ಮ ಸಾಲ/ಬಾಕಿಗಳನ್ನು ವರ್ಗಾಯಿಸಲಾಗಿರುತ್ತದೋ ಅವರು ನಿಮ್ಮ ಸಾಲದ ಮಾಹಿತಿಯನ್ನು ಸಾಲ ಮಾಹಿತಿ ಸಂಸ್ಥೆ(ಸಿಐಸಿ)ಗೆ ತಿಳಿಸುವುದನ್ನು ಮುಂದುವರೆಸುತ್ತಾರೆ.

ಈ) ನಿಮ್ಮ ಸಾಲ/ಬಾಕಿಗಳನ್ನು ಯಾವ ವ್ಯಕ್ತಿ/ಸಂಸ್ಥೆಗೆ ನಾವು ವರ್ಗಾಯಿಸುತ್ತೇವೋ ಅವರ ಬಗೆಗೆ ಏನಾದರೂ ಅಸಂತೃಪ್ತಿಯಿದ್ದರೆ ನಿಮಗೆ ಸಹಾಯ ಮಾಡಲು ನಾವು ಯತ್ನಿಸುತ್ತೇವೆ.

6. ಬಾಕಿ ವಸೂಲಾತಿ ಮತ್ತು ಭದ್ರತೆಗಳ ಮರುಸ್ವಾಧೀನದ ಕುರಿತು ನಿಯಮಾವಳಿಗಳು

6.1 ಬಾಕಿ ವಸೂಲಾತಿ

ಅ) ನಾವು ನಿಮಗೆ ಸಾಲ ನೀಡಿದಾಗಲೆಲ್ಲಾ ಮರುಪಾವತಿಯ ಮೊತ್ತ, ಅವಧಿ ಮತ್ತು ಮರುಪಾವತಿಯ ಅವಧಿಯ ಪ್ರಕ್ರಿಯೆಯನ್ನು ವಿವರಿಸುತ್ತೇವೆ. ಆದಾಗ್ಯೂ, ನೀವು ಮರುಪಾವತಿ ಅನುಸೂಚಿಯನ್ನು ಅನುಸರಿಸದಿದ್ದರೆ, ಸಾಲಗಳ ವಸೂಲಿಗಾಗಿ ಪ್ರಚಲಿತ ಕಾನೂನುಗಳ ಪ್ರಕಾರ ನಿರ್ದಿಷ್ಟ ಪ್ರಕ್ರಿಯೆಯೊಂದನ್ನು ನಾವು ಪಾಲಿಸುತ್ತೇವೆ.

ಆ) ಬಾಕಿ ಮತ್ತು ಭದ್ರತೆಗಳ ಮರುಸ್ವಾಧೀನ ಹಾಗೂ ವಸೂಲಾತಿ ಏಜೆಂಟರ ನೇಮಕಕ್ಕೆ ಸಂಬಂಧಿಸಿದಂತೆ ನಮ್ಮ ಬೋರ್ಡಿನಿಂದ ಅನುಮೋದಿಸಲ್ಪಟ್ಟ ನೀತಿಯೊಂದಿರುತ್ತದೆ.

ಇ) ವಸೂಲಾತಿ ಏಜೆಂಟರನ್ನು ನೇಮಕಮಾಡುವಾಗ ಪ್ರಸ್ತುತವಾದ ಎಲ್ಲ ಕಾನೂನುಗಳು, ನಿಯಮಗಳು, ಅನುಮೋದನೆಗಿರುವ ಮಾರ್ಗದರ್ಶಿ ಸೂಚನೆಗಳು ಮತ್ತು ಷರತ್ತುಗಳು, ಪರವಾನಗಿ ನೀಡುವುದು ಅಥವಾ ನೋಂದಣಿ– ಹೀಗೆ ಪ್ರತಿಯೊಂದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಈ) ಎಚ್ಚರ ಮತ್ತು ಸೂಕ್ಷ್ಮತೆಯಿಂದ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ನಮ್ಮ ವಸೂಲಾತಿ ಏಜೆಂಟರಿಗೆ ಸೂಕ್ತ ತರಬೇತಿ ನೀಡುವುದನ್ನು ಖಾತ್ರಿಪಡಿಸಿಕೊಳ್ಳುತ್ತೇವೆ. ಅವರು ತಮಗೆ ವಹಿಸಿದ ಜವಾಬ್ದಾರಿಯ ಮಿತಿಯೊಳಗೇ ಕಾರ್ಯನಿರ್ವಹಿಸುವುದನ್ನು ನೋಡಿಕೊಳ್ಳುತ್ತೇವೆ.

ಉ) ಈ ಪ್ರಕ್ರಿಯೆಯಲ್ಲಿ ನಿಮಗೆ ನೋಟೀಸು ನೀಡಿ ಅಥವಾ ವ್ಯಕ್ತಿಗತ ಭೇಟಿಗಳನ್ನು ನೀಡಿ ನೆನಪು ಮಾಡುವುದು, ಭದ್ರತೆಯನ್ನು ಮರುಸ್ವಾಧೀನಪಡಿಸಿಕೊಳ್ಳುವ ತೀರ್ಮಾನಕ್ಕೆ ಮುನ್ನ ಇವು ಸೇರುತ್ತವೆ.

ಊ) ಪಾವತಿ ತಪ್ಪಿಸಿದ ಸಂದರ್ಭದಲ್ಲಿ, ವಸೂಲಿ ಏಜೆಂಟರಿಗೆ ಪ್ರಕರಣವನ್ನು ಒಪ್ಪಿಸಬಹುದು. ಈ ಬಗ್ಗೆ ನಿಮಗೆ ಸೂಚನೆ ನೀಡಲಾಗುವುದು.

ಋ) ನಾವು ವಸೂಲಾತಿ ಪ್ರಕ್ರಿಯೆಯನ್ನು ಆರಂಭಿಸಿದಾಗ, ಈ ಬಗ್ಗೆ ನಿಮಗೇನಾದರೂ ದೂರು ಇದ್ದಲ್ಲಿ, ನಮ್ಮ ಸಹಾಯವಾಣಿಯನ್ನು ಸಂಪರ್ಕಿಸಲು ನಿಮಗೆ ತಿಳಿಸಲಾಗುತ್ತದೆ.

ೠ)ನಮ್ಮ ವಸೂಲಾತಿ ಏಜೆಂಟರಿಂದ ನ್ಯಾಯಸಮ್ಮತವಲ್ಲದ ಆಚರಣೆಯ ಬಗ್ಗೆ ನಿಮ್ಮ ದೂರುಗಳನ್ನು ನಾವು ವಿಚಾರಣೆ ಮಾಡುತ್ತೇವೆ. ವಸೂಲಾತಿ ಏಜೆಂಟರು ನಿಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ ಕುರಿತು ನೀವು ನೀಡುವ ದೂರನ್ನು ನಾವು ತಪಾಸಣೆ ಮಾಡುತ್ತೇವೆ. ಬ್ಯಾಂಕಿನ ಪ್ರತಿನಿಧಿ ಅಥವಾ ವಸೂಲಾತಿ ಏಜೆಂಟರು ನಿಯಮಾವಳಿಗಳನ್ನು ಮೀರಿ ನಿಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ ಕುರಿತು ನೀವು ನೀಡುವ ಅರ್ಜಿಯನ್ನು, ಅರ್ಜಿ ನೀಡಿದ ದಿನಾಂಕದಿಂದ ಒಂದು ತಿಂಗಳೊಳಗೆ ವಿಚಾರಣೆ ನಡೆಸಿ ಅದರ ವರದಿಯನ್ನು ನಿಮಗೆ ಒದಗಿಸುತ್ತೇವೆ.ಈ ಪ್ರಕ್ರಿಯೆಯಲ್ಲಿ ನಿಮಗೇನಾದರೂ ನಷ್ಟ ಸಂಭವಿಸಿದ್ದರೆ ಅದನ್ನು ತುಂಬಿಕೊಡುತ್ತೇವೆ.

6.2 ಬಾಕಿ ವಸೂಲಾತಿ ನಿಯಮಾವಳಿ ಮತ್ತು ಭದ್ರತೆಗಳ ಮರುಸ್ವಾಧೀನ

ಬಾಕಿ ವಸೂಲಿ ಮತ್ತು ಭದ್ರತೆಯ ಮರುಸ್ವಾಧೀನ ನೀತಿಯನ್ನು ಅನುಸರಿಸುವಾಗ ಕಾನೂನು ಸಮ್ಮತವಾದ ಹಾದಿ ನಮ್ಮದು. ನೀತಿಯನ್ನು ನಮ್ಮ ವೆಬ್‌ತಾಣದಲ್ಲಿ ಪ್ರದರ್ಶಿಸಲಾಗುತ್ತದೆ ಮತ್ತು ಅದರ ಪ್ರತಿಯೊಂದನ್ನು ನಮ್ಮ ಶಾಖೆಗಳಲ್ಲಿ ಅವಗಾಹನೆಗೆ ಲಭ್ಯವಿರುವಂತೆ ಮಾಡಲಾಗುತ್ತದೆ.

6.2 (ಎ) ಸೌಜನ್ಯ, ಸಜ್ಜನಿಕೆ ಮತ್ತು ಮನವೊಲಿಸುವ ಪದ್ಧತಿ ಮೇಲೆ ನಮ್ಮ ವಸೂಲಾತಿ ನೀತಿ ನಿಂತಿದೆ. ಗ್ರಾಹಕ ನಂಬಿಕೆ ಮತ್ತು ದೀರ್ಘ ಸಂಬಂಧ ಪೋಷಣೆಯನ್ನು ನಾವು ನಂಬಿದ್ದೇವೆ. ನಮ್ಮ ವಸೂಲಾತಿ ನೀತಿಯು ಈ ಕೆಳಗಿನಂತಿದೆ:

I. ನಿಮ್ಮ ಸಾಲದ ಬಾಕಿ ಕುರಿತು ಎಲ್ಲ ಮಾಹಿತಿಯನ್ನೂ ನಿಮಗೆ ಒದಗಿಸುತ್ತೇವೆ ಮತ್ತು ಬಾಕಿಯನ್ನು ಮರುಪಾವತಿಸಲು ಅನುಕೂಲವಾಗುವಂತೆ ತಿಳುವಳಿಕೆ ಪತ್ರವನ್ನು ಕಳಿಸುತ್ತೇವೆ

II. ನಿಮ್ಮ ವಿರುದ್ಧ ಸ್ವಾಧೀನ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳುವಾಗ ನಿಮಗೆ ಲಿಖಿತವಾಗಿ ತಿಳಿಸುತ್ತೇವೆ. ನಿಮ್ಮ ಪ್ರಕರಣವನ್ನು ಯಾರಿಗೆ ವಹಿಸಲಾಗುತ್ತದೋ ಆ ವಸೂಲಾತಿ ಏಜೆನ್ಸಿ/ಏಜೆಂಟರ ಹೆಸರನ್ನು ನಿಮಗೆ ತಿಳಿಸಲಾಗುತ್ತದೆ. ಅವರ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನೂ ನಿಮಗೆ ತಿಳಿಸುತ್ತೇವೆ.

III. ಸ್ವಾಧೀನ ಪ್ರಕ್ರಿಯೆಗೆಂದು ನಾವು ನಿಯಮಿಸಿದ ಸಂಸ್ಥೆ/ಏಜೆನ್ಸಿ/ಫರ್ಮ್‌ಗಳ ಮಾಹಿತಿಯನ್ನು ನಮ್ಮ ವೆಬ್‌ಜಾಲದಲ್ಲಿ ಪ್ರಕಟಿಸುತ್ತೇವೆ

IV. ಮನವಿಯ ಮೇರೆಗೆ ಈ ಕುರಿತ ಅಧಿಕ ಮಾಹಿತಿಯು ನಮ್ಮ ಶಾಖೆಗಳಲ್ಲಿಯೂ ದೊರಕುವಂತೆ ಮಾಡುತ್ತೇವೆ

V. ನಮ್ಮ ಪರವಾಗಿ ಬಾಕಿ ವಸೂಲಾತಿ/ಅಥವ ಸ್ವತ್ತುಗಳ ಸ್ವಾಧೀನಕ್ಕೆಂದು ಬರುವ ಪ್ರತಿನಿಧಿ ಅಥವ ಅಧಿಕಾರಿಗಳು ನಾವು ಅವರಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿ ಮತ್ತು ಪತ್ರಗಳನ್ನು ಹೊಂದಿರುತ್ತಾರೆ. ಮತ್ತು ಮನವಿಯ ಮೇರೆಗೆ ಬ್ಯಾಂಕ್ ಅಥವ ಬ್ಯಾಂಕಿನ ಪರವಾಗಿ ಕೆಲಸ ಮಾಡುವ ಅಧಿಕೃತ ಸಂಸ್ಥೆ ನೀಡಿದ ಗುರುತಿನ ಚೀಟಿಯನ್ನು ತೋರಿಸುತ್ತಾರೆ.

VI. ವಸೂಲಾತಿ ಸಂಸ್ಥೆಗಳಿಗೆ ಸುಸ್ತಿದಾರರ ಕುರಿತು ಮಾಹಿತಿ ನೀಡುವ ಮೊದಲು ಎಲ್ಲವನ್ನೂ ಪರಿಶೀಲನೆ ಮಾಡುವ ವ್ಯವಸ್ಥೆಯನ್ನು ನಾವು ಹೊಂದಿದ್ದು, ನಮ್ಮಿಂದ ಉಂಟಾದ ಲೋಪಗಳಿಗೆ ನಿಮಗಾಗುವ ಅನಗತ್ಯ ಕಿರಿಕಿರಿಯನ್ನು ತಪ್ಪಿಸಲಾಗುವುದು.

6.2 (ಬಿ)

ನಮ್ಮ ಬ್ಯಾಂಕಿನ ನೌಕರರು ಹಾಗೂ ಬ್ಯಾಂಕಿನ ವತಿಯಿಂದ ಬಾಕಿ ವಸೂಲಿಗೆಂದು ಅಥವಾ/ ಮತ್ತು ಭದ್ರತೆಯ ಮರುಸ್ವಾಧೀನಕ್ಕಾಗಿ ಅಧಿಕೃತವಾಗಿ ನೇಮಿಸಿದ ಪ್ರತಿನಿಧಿಗಳು ಸೂಕ್ತ ಕಾರ್ಯತತ್ಪರತೆಯನ್ನು ಹೊಂದಿರುತ್ತಾರೆ. ಅನುಸರಿಸಬೇಕಾದ ನಿಯಮಾವಳಿಗಳು ಇಂತಿವೆ:

(i) ನಿಮ್ಮನ್ನು ನಿಮ್ಮ ವ್ಯಾಪಾರ / ಉದ್ಯೋಗದ ಸ್ಥಳದಲ್ಲಿ ಮತ್ತು ಅಲ್ಲಿ ಲಭ್ಯವಿಲ್ಲದಿದ್ದರೆ, ನಿಮ್ಮ ವಾಸಸ್ಥಾನದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಸ್ಥಳವನ್ನು ಸೂಚಿಸಿಲ್ಲವಾದರೆ ಆಗ ನಿಮ್ಮ ಅಧಿಕೃತ ಪ್ರತಿನಿಧಿಯ ಆಯ್ಕೆಯ ಸ್ಥಳದಲ್ಲಿ ಸಂಪರ್ಕಿಸಲಾಗುವುದು.

(ii) ಗುರುತು ಮತ್ತು ಪ್ರತಿನಿಧಿತ್ವಕ್ಕಾಗಿ ಅಧಿಕಾರದ ವಿಚಾರದಲ್ಲಿ ನಿಮಗೆ ಮೊದಲೇ ತಿಳಿಸಲಾಗುವುದು.

(iii) ನಿಮ್ಮ ಖಾಸಗಿತನವನ್ನು ಗೌರವಿಸಲಾಗುವುದು.

(iv) ನಿಮ್ಮೊಂದಿಗೆ ಸೌಜನ್ಯದಿಂದ ವರ್ತಿಸಲಾಗುವುದು.

(V) ನಿಮ್ಮ ವ್ಯವಹಾರ ಅಥವಾ ಉದ್ಯೋಗದ ವಿಶೇಷ ಪರಿಸ್ಥಿತಿಗಳನ್ನು ಹೊರತುಪಡಿಸಿ, ಸಾಮಾನ್ಯವಾಗಿ ನಮ್ಮ ಪ್ರತಿನಿಧಿ ನಿಮ್ಮನ್ನು 0700 ಮತ್ತು 1900 ತಾಸುಗಳ ನಡುವೆ ಸಂಪರ್ಕಿಸುತ್ತಾರೆ.

(vi) ನಿರ್ದಿಷ್ಟ ಪಡಿಸಿದ ಸಮಯ ಮತ್ತು ನಿರ್ದಿಷ್ಟ ಪಡಿಸಿದ ಜಾಗದಲ್ಲಿರುವಾಗ ಕರೆ ಮಾಡಬಾರದೆಂಬ ತಮ್ಮ ಕೋರಿಕೆಯನ್ನು ಆದಷ್ಟೂ ಮಟ್ಟಿಗೆ ಪಾಲಿಸಲಾಗುವುದು.

(vii) ಮಾಡಿದ ಕರೆಗಳ ಸಂಖ್ಯೆ, ವೇಳೆ ಮತ್ತು ಸಂಭಾಷಣೆಯ ವಿವರಗಳನ್ನು ದಾಖಲಿಸಲಾಗುವುದು.

(viii) ಬಾಕಿಯ ಸಂಬಂಧ ವ್ಯಾಜ್ಯಗಳನ್ನು ಮತ್ತು ಅಭಿಪ್ರಾಯ ಭೇದಗಳನ್ನು ಇಬ್ಬರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಸರಿಪಡಿಸಲು ಎಲ್ಲಾ ರೀತಿಯ ಸಹಾಯವನ್ನೂ ನೀಡಲಾಗುವುದು.

(ix) ಬಾಕಿ ವಸೂಲಿಗಾಗಿ ನಿಮ್ಮಲ್ಲಿಗೆ ಬಂದಾಗ ಸೌಜನ್ಯ ಮತ್ತು ವಿನಯದಿಂದ ವ್ಯವಹರಿಸುವರು. ನಮ್ಮ ಅಧಿಕಾರಿಗಳು/ ಏಜೆಂಟರು ಬೆದರಿಕೆ ಹಾಕುವ, ಯಾವುದೇ ರೀತಿಯ ತ್ರಾಸ ಉಂಟುಮಾಡುವ ಕ್ರಮ ಅನುಸರಿಸುವುದಿಲ್ಲ. ಮಾತಿನ ಮೂಲಕವಾಗಲಿ, ದೈಹಿಕವಾಗಿಯಾಗಲಿ ಅವರು ತ್ರಾಸ ನೀಡುವುದಿಲ್ಲ; ನಿಮ್ಮನ್ನು ಅಪಮಾನಕ್ಕೆ ಗುರಿಮಾಡುವ ಉದ್ದೇಶದಿಂದ ಏನನ್ನೂ ಮಾಡುವುದಿಲ್ಲ; ನಿಮ್ಮ ಕುಟುಂಬದ ಸದಸ್ಯರು, ಸ್ನೇಹಿತರು, ಹೀಗೆ ಯಾರ ಖಾಸಗಿ ವಿಷಯದಲ್ಲೂ ತಲೆ ಹಾಕುವುದಿಲ್ಲ; ಹೆದರಿಸುವ ಇಲ್ಲವೆ ಅನಾಮಿಕ ಕರೆಗಳನ್ನು ಮಾಡುವುದಿಲ್ಲ; ಮತ್ತು ಸುಳ್ಳು ಮತ್ತು ದಾರಿ ತಪ್ಪಿಸುವಂತಹ ನಿರೂಪಣೆಗಳನ್ನು ಮಾಡುವುದಿಲ್ಲ.

ಆದಾಗ್ಯೂ ನಿಮ್ಮ ಹೊಸ ಸಂಪರ್ಕ ವಿವರಗಳನ್ನು ಕಾಲಕಾಲಕ್ಕೆ ತಿಳಿಸುತ್ತಿರುವ ಜವಾಬ್ದಾರಿ ನಿಮ್ಮದು. ಅಷ್ಟಾಗಿಯೂ ನಿಮ್ಮನ್ನು ಸಂಪರ್ಕಿಸಲು ಬ್ಯಾಂಕಿಗೆ ಸಾಧ್ಯವಾಗದೆ ಹೋದಲ್ಲಿ, ಸಾರ್ವಜನಿಕ ಮೂಲಗಳಿಂದ ಲಭ್ಯವಾಗುವ ಮಾಹಿತಿಯನ್ನು ಬ್ಯಾಂಕ್ ಸಂಗ್ರಹಿಸುತ್ತದೆ. ನಿಮ್ಮನ್ನು ಹುಡುಕಲು ನಿಮ್ಮ ಸ್ನೇಹಿತರನ್ನು/ ಸಂಬಂಧಿಗಳನ್ನು ಸಂಪರ್ಕಿಸಲಾಗುತ್ತದೆ.

(X) ಕುಟುಂಬದಲ್ಲಿ ಮರಣ ಅಥವಾ ಇತರೆ ದುಃಖದಾಯಕ ಸನ್ನಿವೇಶಗಳಲ್ಲಿ ಬಾಕಿ ವಸೂಲಾತಿಗಾಗಿ ಕರೆ ಮಾಡುವುದಿಲ್ಲ ಮತ್ತು ಭೇಟಿ ನೀಡುವುದಿಲ್ಲ.

****

ಭಾರತೀಯ ರಿಸರ್ವ್ ಬ್ಯಾಂಕ್, ಭಾರತೀಯ ಬ್ಯಾಂಕುಗಳ ಸಂಘ ಮತ್ತು ಸದಸ್ಯ ಬ್ಯಾಂಕುಗಳೊಡನೆ ಸಹಯೋಗದಿಂದ ಈ ಸಂಹಿತೆಯನ್ನು (ಕೋಡ್) ಬ್ಯಾಂಕಿಂಗ್ ಕೋಡ್ಸ್ ಮತ್ತು ಸ್ಟಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯ (ಬಿ.ಸಿ.ಎಸ್.ಬಿ.ಐ) ರೂಪಿಸಿದೆ. ಈ ಸಂಹಿತೆಯ ಮುಖ್ಯ ಉದ್ದೇಶವು ಒಳ್ಳೆಯ ಮತ್ತು ಹಿತಕರವಾದ ಬ್ಯಾಂಕಿಂಗ್ ಪದ್ಧತಿಗಳನ್ನು ಪ್ರೋತ್ಸಾಹಿಸುವುದಾಗಿದೆ. ಕನಿಷ್ಠ ಮಾನದಂಡಗಳು, ಹೆಚ್ಚುತ್ತಿರುವ ಪಾರದರ್ಶಕತೆ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾಮಾನ್ಯ ಜನರಲ್ಲಿ ಭರವಸೆ ಮೂಡಿಸುವುದು, ಉತ್ತಮ ಮಟ್ಟದ ಕಾರ್ಯಪರತೆಯಿಂದ ಮತ್ತು ಅತಿಮುಖ್ಯವಾಗಿ ಬ್ಯಾಂಕ್ ಮತ್ತು ಗ್ರಾಹಕರ ನಡುವೆ ಅನ್ಯೋನ್ಯ ಸಂಬಂಧ ಕಲ್ಪಿಸುವುದರ ಮೂಲಕ ಬ್ಯಾಂಕಿಂಗ್ ಪದ್ಧತಿಗಳನ್ನು ಉನ್ನತಮಟ್ಟಕ್ಕೇರಿಸುವ ಉದ್ದೇಶ ಅದರಲ್ಲಿದೆ. ಬಿ.ಸಿ.ಎಸ್.ಬಿ.ಎಸ್. ಒಂದು ಸ್ವಾಯತ್ತ ಸಂಸ್ಥೆಯಾಗಿ ಫೆಬ್ರವರಿ 2006ರಲ್ಲಿ ಸ್ಥಾಪನೆಗೊಂಡಿತು. ಅದರ ಕೆಲಸವೆಂದರೆ "ಬ್ಯಾಂಕುಗಳು ಅನುಷ್ಠಾನಕ್ಕೆ ತರಬೇಕಾದ ಬ್ಯಾಂಕಿಂಗ್ ಸಂಹಿತೆ ಮತ್ತು ಮಾನದಂಡಗಳನ್ನು ನಿಜಾರ್ಥದಲ್ಲಿ ಅನುಸರಿಸುವಂತೆ ಮಾಡಲು ನಿಗಾ ವಹಿಸುವುದು ಮತ್ತು ಅದನ್ನು ಸಾಧಿಸುವುದು". ಬಿ.ಸಿ.ಎಸ್.ಬಿ.ಐ ಎರಡು ತೆರನಾದ ಸಂಹಿತೆಗಳನ್ನು ರೂಪಿಸಿದೆ. ಗ್ರಾಹಕರಿಗೆ ಬ್ಯಾಂಕ್‌ಗಳ ಬದ್ಧತೆಯನ್ನು ನಿರೂಪಿಸುವ ಸಂಹಿತೆ ಹಾಗೂ ಎಂ.ಎಸ್.ಎಂ.ಇಗಳಿಗೆ ಈ ಬ್ಯಾಂಕ್‌ಗಳ ಬದ್ಧತೆಯನ್ನು ನಿರೂಪಿಸುವ ಸಂಹಿತೆ. ಈ ಸಂಹಿತೆಯನ್ನು ಬಿ.ಸಿ.ಎಸ್.ಬಿ.ಐನ ಸದಸ್ಯ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು, ನಗರ ಸಹಕಾರಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಅಳವಡಿಸಿಕೊಂಡಿವೆ. ಸಂರಚನೆ ಮತ್ತು ಕಾರ್ಯ ನಿಯೋಗದ ದೃಷ್ಟಿಯಿಂದ ಬಿ.ಸಿ.ಎಸ್.ಬಿ.ಐ ದೂರುಗಳನ್ನು ಪರಿಹರಿಸುವ ವೇದಿಕೆಯಲ್ಲ. ಆದಾಗ್ಯೂ, ಬಿ.ಸಿ.ಎಸ್.ಬಿ.ಐ ದೂರುಗಳನ್ನು ಗಮನಿಸುತ್ತದೆ. ಅದರ ಉದ್ದೇಶ ವ್ಯವಸ್ಥಾತ್ಮಕ ಕೊರತೆಗಳೇನಾದರೂ ಇದ್ದಲ್ಲಿ ಅವನ್ನು ಗುರುತಿಸುವುದು. ಆ ಕೊರತೆಗಳು ನೀತಿಗಳಲ್ಲಿ ಕಾರ್ಯವಿಧಾನಗಳಲ್ಲಿ ಮತ್ತು ಬ್ಯಾಂಕುಗಳು ಅನುಸರಿಸುವ ಪದ್ಧತಿಗಳಲ್ಲಿ ತೋರಬಹುದು. ಅಂತಹ ಕೊರತೆಗಳನ್ನು ಸರಿಪಡಿಸಲು ಕಾರ್ಯಕ್ರಮಗಳನ್ನು ರೂಪಿಸುವುದು ಬಿ.ಸಿ.ಎಸ್.ಬಿ.ಐನ ಕಾರ್ಯವ್ಯಾಪ್ತಿಗೆ ಸೇರಿದೆ. ಬಿ.ಸಿ.ಎಸ್.ಬಿ.ಐನ ಬಗ್ಗೆ ಹೆಚ್ಚಿನ ಮಾಹಿತಿಗಳಿಗೆ www.bcsbi.org.in ವೆಬ್‌ತಾಣವನ್ನು ಸಂಪರ್ಕಿಸಿ.